# ಐಕ್ಯರಂಗ

ವಾರ ಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ


ಸಂಪುಟ 6 | ಸಂಚಿಕೆ 8 | ಫೆಬ್ರುವರಿ 19, 1984 | ಬೆಲೆ 60 ಪೈಸೆ


# ಸೋವಿಯತ್ ಅಧ್ಯಕ್ಷ ಆಂಡ್ರೋಪೋವ್ ಇನ್ನಿಲ್ಲ

ಸೋವಿಯತ್ ಯೂನಿಯನ್ನಿನ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದ ಹಾಗೂ ಸೋವಿಯತ್ ಯೂನಿಯನ್ನಿನ ಅಧ್ಯಕ್ಷರಾಗಿದ್ದ ಕಾಮ್ರೇಡ್ ಯೂರಿ ಆಂಡ್ರೋಪೋವ್ ಅವರು ಫೆಬ್ರವರಿ ೯ ರಂದು ಸಂಜೆ ೪-೫೦ ಕ್ಕೆ ಮಾಸ್ಕೋದಲ್ಲಿ ಮರಣ ಹೊಂದಿದರು.

ಆಂಡ್ರೋಪೋವ್ ಅವರ ಮರಣಕ್ಕೆ ಜಗತ್ತಿನ ಎಲ್ಲಾ ದೇಶಗಳ ನಾಯಕರುಗಳು ತಮ್ಮ ಅತೀವ ದುಃಖವನ್ನು ವ್ಯಕ್ತಪಡಿಸಿದ್ದಾರೆ.

ಕಳೆದ ಕೆಲವು ತಿಂಗಳುಗಳಿಂದ ತೀವ್ರವಾಗಿ ಅಸ್ವಸ್ಥರಾಗಿದ್ದ ೬೯ ವರ್ಷ ವಯಸ್ಸಿನ ಆಂಡ್ರೋಪೋವ್ ಅವರ ಸಾವು ಸೋವಿಯತ್ ಕಮ್ಯೂನಿಸ್ಟ್ ಪಕ್ಷಕ್ಕೂ, ರಶ್ಯಾದ ಜನತೆಗೂ ಜಾಗತಿಕ ಶಾಂತಿ ಚಳುವಳಿಗೂ ಹಾಗೂ ಜಗತ್ತಿನ ಎಲ್ಲಾ ಪ್ರಗತಿಶೀಲ ಜನಸಮುದಾಯಕ್ಕೂ ಅಪಾರ ನಷ್ಟವನ್ನು ಉಂಟು ಮಾಡಿದೆ.



ಅಂತರರಾಷ್ಟ್ರೀಯ ರಾಜಕಾರಣದ ಮಹಾನ್ ಮುತ್ಸದ್ದಿಯಾಗಿದ್ದ ಕಾ ಆಂಡ್ರೋಪೋವ್ ಅವರ ಸಾವಿನ ಸುದ್ದಿಯನ್ನು ಸೋವಿಯತ್ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ಅತ್ಯಂತ ದುಃಖದಿಂದ ಪ್ರಕಟಿಸುತ್ತಿದ್ದಂತೆಯೇ ಕ್ಷಣ ಕಾಲ ದಿಗ್ಭ್ರಮೆಗೊಂಡ ಜಗತ್ತಿನ ರಾಜಕೀಯ ಮುಖಂಡರು ಅಗಲಿದ ಮಹಾನ್ ನಾಯಕನಿಗೆ ತಮ್ಮ ಶ್ರದ್ಧಾಂಜಲಿಯನ್ನು ಸಲ್ಲಿಸಿದರು.

ಮಾಸ್ಕೋದ ಮುಖ್ಯ ಬೀದಿಗಳಲ್ಲಿನ ಕಟ್ಟಡಗಳ ಮೇಲೆ ಸೋವಿಯತ್ ಯೂನಿಯನ್ನಿನ ರಾಷ್ಟ್ರೀಯ ಧ್ವಜ [illegible] ಟ್ಟವನ್ನು ಶೋಕ ಸೂಚಕವಾದ [illegible] ಪಟ್ಟಿಗಳೊಡನೆ ಹಾರಿಬಿಡಲಾ[illegible] ಸೋವಿಯತ್ ನಾಡಿನ [illegible] ಲ್ಲು ದಿನಗಳ ಕಾಲ ಶೋಕ [illegible] ಲಾಯಿತು.

## ಕಾ. ಆಂಡ್ರೋಪೋವ್ ನಿಧನ

### ಜಾಗತಿಕ ಕಮ್ಯೂನಿಸ್ಟ್ ಚಳವಳಿಗಾದ ಮಹಾನ್ ನಷ್ಟ

### —ಸಿ. ಪಿ. ಐ. [ಎಂ] ಪೊಲಿಟ್ ಬ್ಯೂರೋ

ಸೋವಿಯತ್ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯೂ ಸೋವಿಯತ್ ಯೂನಿಯನ್ನಿನ ಅಧ್ಯಕ್ಷರೂ ಆಗಿದ್ದ ಕಾಂ. ಆಂಡ್ರೋಪೋವ್ ಅವರ ನಿಧನ ಜಾಗತಿಕ ಕಮ್ಯೂನಿಸ್ಟ್ ಚಳವಳಿಗೂ, ಜಗತ್ತಿನ ಶಾಂತಿ ಪ್ರಿಯ ಶಕ್ತಿಗಳಿಗೂ ಉಂಟಾಗಿರುವ ಮಹಾನ್ ನಷ್ಟ ಎಂಬುದಾಗಿ ಸಿ. ಪಿ. ಐ (ಎಂ)ನ ಪೊಲಿಟ್ ಬ್ಯೂರೋ ತನ್ನ ಪ್ರಕಟನೆಯಲ್ಲಿ ತಿಳಿಸಿದೆ. ಅವರ ನಿಧನಕ್ಕೆ ತೀವ್ರ ಶೋಕವನ್ನು ಪಿ ಬಿ ವ್ಯಕ್ತಪಡಿಸಿದೆ.

ಜಗತ್ತಿನಲ್ಲಿ ಅಣುಯುದ್ಧದ ಅಪಾಯವನ್ನು ತಪ್ಪಿಸಲು ಕಾಂ. ಆಂಡ್ರೋಪೋವ್ ತೀವ್ರವಾಗಿ ಶ್ರಮಿಸಿದ್ದರು.

ಅಮೇರಿಕನ್ ಸಾಮ್ರಾಜ್ಯಶಾಹಿಗಳು ಅಣುಯುದ್ಧದ ಪ್ರಯತ್ನದಲ್ಲಿ ತೊಡಗಿರುವ ಈ ಗಂಭೀರ ಸನ್ನಿವೇಶದಲ್ಲಿ ಕಾಂ ಆಂಡ್ರೋಪೋವ್ ಅವರ ನಿಧನ ವಿಶ್ವಶಾಂತಿಗಾಗಿ ಹೋರಾಡುತ್ತಿರುವ ಶಾಂತಿ ಪ್ರಿಯ ಶಕ್ತಿಗಳಿಗೆ ಉಂಟಾಗಿರುವ ಮಹಾನ್ ನಷ್ಟ ಎಂಬುದಾಗಿ ಪಿ ಬಿ ತಿಳಿಸಿದೆ.

# ಕೊನ್‌ಸ್ಟಾಂತಿನ್ ಚೆರ್ನೆಂಕೋ

## ಸಿ. ಪಿ. ಎಸ್. ಯು. ನ ನೂತನ ಪ್ರ. ಕಾರ್ಯದರ್ಶಿ

72 ವರ್ಷ ವಯಸ್ಸಿನ ಕೊನ್‌ಸ್ಟಾಂತಿನ್ ಉಸ್ತಿನೋವಿಚ್ ಚೆರ್ನೆಂಕೋ ಅವರು ಸೋವಿಯತ್ ಯೂನಿಯನ್ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.

ಚೆರ್ನೆಂಕೋ ಅವರು ಸಿ ಪಿ. ಎಸ್. ಯು. ನ ಪೊಲಿಟ್ ಬ್ಯೂರೋ ಸದಸ್ಯರೂ ಹಾಗೂ ಕೇಂದ್ರ ಸಮಿತಿಯ ಕಾರ್ಯದರ್ಶಿಯೂ ಆಗಿ ಕಾರ್ಯ ನಿರ್ವಹಿಸುತ್ತಿದ್ದರು.

ವಿಶ್ವಶಾಂತಿಗಾಗಿ ತೀವ್ರವಾಗಿ ಶ್ರಮಿಸುವ ಭರವಸೆ ನೀಡಿರುವ ಚೆರ್ನೆಂಕೋ ಯಾವುದೇ ಸಾಮ್ರಾಜ್ಯಶಾಹಿ ಆಕ್ರಮಣವನ್ನು ಎದುರಿಸಿ ನಿಲ್ಲುವುದಾಗಿ ತಿಳಿಸಿರುವ ಅವರು ಯೂರಿ ಆಂಡ್ರೋಪೋವರ ನೀತಿಗಳನ್ನೇ ಅನುಸರಿಸಿಕೊಂಡು ಹೋಗುವುದಾಗಿ, ಸೋವಿಯತ್ ಒಕ್ಕೂಟದ ಸರ್ವಾಂಗೀಣ ಮುನ್ನಡೆಗಾಗಿ ತಮ್ಮ ಸರ್ವ ಶಕ್ತಿ, ಹಾಗೂ ಅನುಭವವನ್ನು ವಿನಿಯೋಗಿಸುವುದಾಗಿ ಕಾ. ಚೆರ್ನೆಂಕೋ ಘೋಷಿಸಿದ್ದಾರೆ.

ಸಮ ಬಲದ ದೇಶಗಳ ನಡುವೆ ನಡೆಯುವ ಪ್ರಾಮಾಣಿಕ ಮಾತುಕತೆಯು ಎರಡೂ ಕಡೆಯ ಭದ್ರತೆಯನ್ನು ಕಾಪಾಡಲು ಸಹಾಯಕವಾಗಬೇಕೆಂದು ಕರೆ ನೀಡಿದ್ದಾರೆ. ಅಂತರ್‌ರಾಷ್ಟ್ರೀಯ ಸಮಸ್ಯೆಗಳನ್ನು ಬಗೆ ಹರಿಸುವಲ್ಲಿ. ಇದು ಬಹು ಮುಖ್ಯವೆಂದು ತಿಳಿಸಿದ್ದಾರೆ.

ಕಾ. ಆಂಡ್ರೋಪೋವ್ ಅವರಿಗೆ ಅಂತಿಮ ಪ್ರಣಾಮಗಳನ್ನು ಸಲ್ಲಿಸಲು ಇಡೀ ರಶ್ಯನ್ ಜನತೆಯನ್ನು ಪ್ರತಿನಿಧಿಸಿದ್ದ ಕಾ. ಚೆರ್ನೆಂಕೋ ಅವರು ತಮ್ಮ ಭಾಷಣದಲ್ಲಿ "ನಾವು ಯಾವುದೇ ಭಯೋತ್ಪಾದನೆಗೂ ಅಂಜುವುದಿಲ್ಲ ನಮ್ಮ ಮಿಲಿಟರಿ ಶಕ್ತಿ ಬಲಿಷ್ಠವಾಗಿದೆ, ಸೋವಿಯತ್ ಜನತೆ ಸಾಧಿಸಿರುವುದನ್ನೆಲ್ಲಾ ಕಾಪಾಡುವಷ್ಟು ಬಲಿಷ್ಠವಾಗಿದೆ" ಎಂದು ಹೇಳಿದ್ದಾರೆ.

# ರಾಜ್ಯ ಸಮಿತಿ ಶ್ರದ್ಧಾಂಜಲಿ

ಕಾ. ಆಂಡ್ರೋಪೋವ್ ಅವರ ನಿಧನಕ್ಕೆ ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿ ತನ್ನ ಆಳವಾದ ಶೋಕವನ್ನು ವ್ಯಕ್ತಪಡಿಸಿದೆ.

ಕಾ ಆಂಡ್ರೋಪೋವ್ ಅವರು ಅಧಿಕಾರಕ್ಕೆ ಬಂದ ಒಡನೆಯೇ ಪ್ರಪಂಚದ ಎಲ್ಲಾ ಕಮ್ಯೂನಿಸ್ಟರನ್ನೂ, ಎಲ್ಲಾ ಸಮಾಜವಾದೀ ದೇಶಗಳನ್ನೂ ಒಂದುಗೂಡಿಸಲು ಕೈ ಗೊಂಡ ಪ್ರಾಮಾಣಿಕ ಕ್ರಮಗಳನ್ನು ಸ್ಮರಿಸಿರುವ ರಾಜ್ಯ ಸಮಿತಿ ಕಾ ಆಂಡ್ರೋಪೋವ್ ಅವರ ನಿಧನ ಇಡೀ ಮಾನವ ಕೋಟಿಗೆ ಮತ್ತು ಜಗತ್ತಿನ ಕಾರ್ಮಿಕ ವರ್ಗಕ್ಕೆ ಅಪಾರ ನಷ್ಟವನ್ನುಂಟು ಮಾಡಿದೆ ಎಂಬುದಾಗಿ ತಿಳಿಸಿದೆ.

ವಿಶ್ವಶಾಂತಿಯ ರಕ್ಷಣೆಗೋಸ್ಕರ ಆಂಡ್ರೋಪೋವ್ ಅವರು ಮಾಡಿರುವ ರಚನಾತ್ಮಕ ಪ್ರಯತ್ನಗಳು ಇಡೀ ಮಾನವ ಕುಲ ಅವರನ್ನು ಎಂದೆಂದಿಗೂ ಸ್ಮರಿಸುವಂತೆ ಮಾಡಿದೆ ಎಂಬುದಾಗಿ ಸಿ ಐ ಟಿ ಯು. ನ ಕರ್ನಾಟಕ ರಾಜ್ಯ ಸಮಿತಿ ಅಗಲಿದ ನಾಯಕನಿಗೆ ಅರ್ಪಿಸಿದ ಶೋಕ ಸಂದೇಶದಲ್ಲಿ ತಿಳಿಸಿದೆ.

15-2-84 ರಂದು ಇಸ್ಕಸ್ ಕೆ. ಎಸ್. ಪಿ. ಎಸ್. ಓ, ಸಿ. ಪಿ. ಐ (ಎಂ) ಸಿ.ಪಿ.ಐ. ಮುಂತಾದ ಸಂಘಟನೆಗಳು ಬೆಂಗಳೂರಿನಲ್ಲಿ ಬಹಿರಂಗ ಸಭೆಯನ್ನು ನಡೆಸಿ ಆಂಡ್ರೋಪೋವ್ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದೆ ಸಭೆಯಲ್ಲಿ ಸಿ. ಪಿ. ಐ (ಎಂ) ನ ಹಿರಿಯ ನಾಯಕರಾದ ಕಾ ಎನ್ ಎಲ್. ಉಪಾಧ್ಯಾಯ ಅವರು ಮಾತನಾಡಿದರು.

## ಫೆಬ್ರುವರಿ 14 ರಂದು ಅಂತ್ಯಕ್ರಿಯೆ

ಕಾ. ಆಂಡ್ರೋಪೋವ್ ಅವರ ಮೃತ ದೇಹವನ್ನು ಫೆ 14ರಂದು ಮಾಸ್ಕೋದ ಕೆಂಪು ಚೌಕದಲ್ಲಿ ಸಕಲ ಸರ್ಕಾರೀ ಗೌರವಗಳೊಂದಿಗೆ ಅಂತ್ಯಕ್ರಿಯೆ ಮಾಡಲಾಯಿತು. ಆರು ದಿನಗಳ ಕಾಲ ಸಾರ್ವಜನಿಕರ ದರ್ಶನಕ್ಕೆಂದು ಕಾಮನ್ಸ್ ಭವನದಲ್ಲಿ ಇಡಲಾಗಿದ್ದ ಆಂಡ್ರೋಪೋವ್ ಅವರ ದೇಹವನ್ನು ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು. ವಿವಿಧ ದೇಶಗಳ ಗಣ್ಯರು, ರಷ್ಯಾದ ಕಮ್ಯೂನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯರು ಆಂಡ್ರೋಪೋವ್ ಅವರ ಮಡದಿ ಮಕ್ಕಳು ಇದರಲ್ಲಿ ಭಾಗವಹಿಸಿದ್ದರು.

ಆಂಡ್ರೋಪೋವ್ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ಮಾಸ್ಕೋಗೆ ತೆರಳಿದ್ದ ಭಾರತದ ಪ್ರಧಾನಿ ಶ್ರೀಮತಿ ಗಾಂಧಿಯವರು ಆಂಡ್ರೋಪೋವ್ ಅವರ ಮೃತದೇಹಕ್ಕೆ ಪುಷ್ಪಗುಚ್ಛ ಅರ್ಪಿಸಿ ಗೌರವ ಸಲ್ಲಿಸಿದರು.

ಮಾಸ್ಕೋ ನಗರದ ಮುಖ್ಯ ಬೀದಿ

(ಕೊನೇ ಪುಟ ನೋಡಿ)

ಕರ್ನಾಟಕ ರಾಜ್ಯದಲ್ಲಿ

# ವಿದ್ಯುತ್‌ಶಕ್ತಿ ಕಡಿತದಿಂದ ಕೋಟ್ಯಾಂತರ ರೂಪಾಯಿ ಹಾನಿ

ವಿದ್ಯುತ್ ಶಕ್ತಿ ಕಡಿತದಿಂದಾಗಿ ನಮ್ಮ ರಾಜ್ಯದ ಕೈಗಾರಿಕೆಗಳು ರೂ 3000 ಕೋಟಿ ಹಾನಿಯನ್ನನುಭವಿಸಲಿವೆಂಬುದಾಗಿ ಕೆಲವರು ಅಭಿಪ್ರಾಯಪಟ್ಟಿದ್ದಾರೆ. ನಮ್ಮ ರಾಷ್ಟ್ರದಲ್ಲೀಗ ತಯಾರಾಗುವ ವಿದ್ಯುಚ್ಛಕ್ತಿ ಇತರ ದೇಶಗಳಿಗೆ ಹೋಲಿಸಿದರೆ ತೀರಾ ಕಡಿಮೆಯಾಗಿದೆ. ನಮ್ಮ ದೇಶದ ಶೇಕಡ 82 ರಷ್ಟು ಹಳ್ಳಿಗಳಿಗೆ ವಿದ್ಯುತ್ ದೊರೆಯುತ್ತಿಲ್ಲ. ಆದರೆ ಉತ್ಪಾದನೆಯಾದ ವಿದ್ಯುತ್‌ಶ್ಚಕ್ತಿ ಯಾವಾಗಲು ನಿರಂತರವಾಗಿ ದೊರೆಯುವ ನಂಬಿಕೆಯಿಲ್ಲ. ವಿದ್ಯುತ್ ಕಡಿತವು ಸಾಮಾನ್ಯವಾಗಿ ಎಲ್ಲ ರಾಜ್ಯಗಳಲ್ಲೂ ಇದೆ. ನಮ್ಮ ರಾಜ್ಯದಲ್ಲಿ ಇದು ಈ ವರ್ಷ ತೀವ್ರ ಸ್ವರೂಪ ತಾಳಿದೆ. 1982 ರಲ್ಲಿ ಗುಂಡು ರಾವ್ ಸರಕಾರವಿದ್ದಾಗ ಕೆಲವು ಕೈಗಾರಿಕೆಗಳಿಗೆ ನೂರಕ್ಕೆ ನೂರರಷ್ಟು ಕಡಿತ ಮಾಡುವುದರಲ್ಲಿತ್ತು. ಆದರೆ ಕಾರಣಾಂತರದಿಂದ ಅದು ಕಾರ್ಯಗತವಾಗಿಲ್ಲ.

ವಿದ್ಯುತ್ ಕೊರತೆಯಿಂದ ಕೈಗಾರಿಕೆಗಳಿಗಷ್ಟೇ ನಷ್ಟವಲ್ಲ ಕಾರ್ಮಿಕರೂ ವೇತನ ಕಳೆದುಕೊಳ್ಳುತ್ತಾರೆ. ಉತ್ಪಾದನೆ ಕಡಿಮೆಯಾಗಿ ಸಾಮಗ್ರಿಗಳ ಬೆಲೆ ಏರುತ್ತವೆ. ಇದರಿಂದ ಸಾರ್ವಜನಿಕರಿಗೆ ನಷ್ಟವಾಗುತ್ತದೆ. ಸರಕಾರಕ್ಕೆ ಬರುವ ಮಾರಾಟತೆರಿಗೆ ಮತ್ತಿತರ ವರಮಾನ ಕಡಿಮೆಯಾಗುತ್ತದೆ ಮತ್ತು ಸಾರ್ವಜನಿಕರಿಗೆ ಅಪಾರ ತೊಂದರೆಯಾಗುತ್ತದೆ.

ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷ ಫಿಲಿಪ್ ಲೂಯಿಸ್ ಮತ್ತು ಕರ್ನಾಟಕ ವಾಣಿಜ್ಯೋದ್ಯಮ ಸಂಘದ ಅಧ್ಯಕ್ಷರಾದ ಶ್ರೀ ಕಸ್ಯಪ್ ರವರ ಅಭಿಪ್ರಾಯದಲ್ಲಿ ಹಿಂದಿನ ಸರಕಾರ ವಿದ್ಯುತ್ ಪೂರೈಕೆ ಕುರಿತು ಸರಿಯಾದ ನಿಲುವು ತಾಳಿ ಕಾರ್ಯಪ್ರವೃತ್ತರಾಗದಿದ್ದುದರಿಂದ ಇಂದು ಈ ಪರಿಸ್ಥಿತಿಯನ್ನೆದುರಿಸಬೇಕಾಗಿದೆ. ಇದಲ್ಲದೆ ಹೈಟೆನ್ಷನ್ ವಿದ್ಯುತ್ ಉಪಯೋಗಿಸುವವರು ಶೇಕಡ 63 ರಷ್ಟು ಶಕ್ತಿಯನ್ನು ನುಂಗಿ ಬಿಡುತ್ತಿದ್ದಾರೆಂದೂ ಆರೋಪಿಸಿದ್ದಾರೆ. ನಮ್ಮ ರಾಜ್ಯದ ಗ್ರಿಡ್ ಭದ್ರವಾಗಿಲ್ಲದಿರುವುದರಿಂದ ವಿದ್ಯುತ್ ಪೂರೈಕೆ ಮೇಲಿಂದ ಮೇಲೆ ನಿಂತು ಹೋಗುತ್ತಿದೆ ಎಂದೂ, ಆದ್ದರಿಂದ ಕೆ. ಇ. ಬಿ. ಯವರು ಗ್ರಿಡಗಳನ್ನು ಭದ್ರಗೊಳಿಸುವುದು ಅಗತ್ಯವೆಂದೂ ಸೂಚಿಸಿದ್ದಾರೆ. ಸರಿಯಾದ ನೀರು ಶೇಖರಣೆ ವ್ಯವಸ್ಥೆಯ ಅಭಾವದಿಂದ ಕಾಳೀ ಯೋಜನೆಯ 4 ಘಟಕಗಳು ಕೆಲಸ ಮಾಡುತ್ತಿಲ್ಲವೆಂದೂ, ರಾಯಚೂರಿನ ಥರ್ಮಲ್ ಘಟಕದಲ್ಲುಂಟಾದ ತೊಂದರೆಯಿಂದಾಗಿ ವಿದ್ಯುತ್ ಉತ್ಪಾದನೆಗೆ ಅಡ್ಡಿಯಾಗುತ್ತಿದೆಯೆಂದೂ ಹೇಳಿದ್ದಾರೆ. ಈ ಸಮಸ್ಯೆಯನ್ನು ಪರಿಹರಿಸಲು ಕೂಡಲೇ ಕ್ರಮ ತೆಗೆದುಕೊಳ್ಳುವುದು ಸರಕಾರದ ಕರ್ತವ್ಯ. ರಾಜ್ಯದ ಅಭಿವೃದ್ಧಿಗೂ, ಕೈಗಾರಿಕೆಗಳ ಬೆಳವಣಿಗೆಗೂ ಕೃಷಿ ಉತ್ಪಾದನೆಗೂ ವಿದ್ಯುತ್ ಅತ್ಯಗತ್ಯ. ವಿದ್ಯುತ್ ಕಡಿತದಿಂದ ಜನ ಕಂಗಾಲಾಗಿರುವಾಗ ಈ ಸಮಸ್ಯೆಯನ್ನು ಬಗೆಹರಿಸಲು ಸರಕಾರ ವಿಶೇಷ ಗಮನ ಕೊಡ ಬೇಕಾಗಿದೆ.

## ಸರಕಾರ ಅನುಸರಿಸುತ್ತಿರುವ ನೀತಿಯಾವುದು ?

ರಾಜ್ಯದ ಜನತಾ ಸರ್ಕಾರವನ್ನುರುಳಿಸಲು ಕಾಂಗ್ರೆ ಮಾಡಿದ ಪ್ರಯತ್ನಗಳೂ, ನಡೆಸಿದ ಪಿತೂರಿಗಳೂ ವಿಫಲಗೊಂಡಿರುವುದು ಎಲ್ಲರಿಗೂ ತಿಳಿದಿದೆ. ಆದರೆ ಈ ಸರಕಾರವಾದರೂ ಅನುಸರಿಸುತ್ತಿರುವ ಹಲವು ಧೋರಣೆಗಳು ಜನ ಬೆಂಬಲ ಪಡೆಯುವವಲ್ಲವೆಂದು ನಾವು ಹೇಳಬೇಕಾಗಿದೆ. ಏಕಾಏಕಿಯಾಗಿ ಹಾಲಿನ ದರವನ್ನು ಹೆಚ್ಚಿಸಲಾಯಿತು. ಬಸ್ಸುದರ ಏರಿಕೆಯನ್ನಂತೂ ಸಮರ್ಥಿಸಲು ಯಾರಿಂದಲೂ ಸಾಧ್ಯವಾಗಿಲ್ಲ. ಹಾಲು ಸರಬರಾಜು ಸಂಸ್ಥೆಗೆ ನಷ್ಟವಾಗಿಯೆಂದೂ ಕೆ. ಎಸ್. ಆರ್. ಟಿ. ಸಿ ಗೆ ನಷ್ಟವಾಗುತ್ತಿದೆಂದೂ ಹೇಳಿ ಈ ದರಗಳನ್ನು ಏರಿಸಿದ್ದಾಯಿತು. ವಿದ್ಯುತ್ ದರಗಳನ್ನು ಇದೇ ಕಾರಣದಿಂದ ಏರಿಸಲಾಯಿತು. ಬೆಲೆ ಏರಿಕೆಯಿಂದ ಪರಿತಪಿಸುತ್ತಿರುವ ಜನರಿಗೆ ಇದು ಗಾಯದ ಮೇಲೆ ಬರೆ ಎಳೆದಂತಾಯಿತು. ಈ ಕ್ರಮ ಕೈಗೊಂಡಾಗ ಸರಕಾರಕ್ಕೆ ಬೆಂಬಲ ಕೊಡುತ್ತಿರುವ ಪಕ್ಷಗಳೊಂದಿಗೆ ಚರ್ಚಿಸಬೇಡವೆ ! ತಮ್ಮ ಪಕ್ಷವನ್ನಾಗಲಿ ಕೇಳಬೇಡವೆ ? ಇದೇನೂ ನಡೆದಿಲ್ಲ. ಈಗಲೂ ಯಾವ ಪಕ್ಷವನ್ನೂ ಕೇಳದೆ ಸರಕಾರ 10 ಪೈಸೆ ಯಷ್ಟು ಹಾಲಿನದರ ಕಡಿಮೆ ಮಾಡಿದೆ. ಮೊದಲು 40 ಪೈಸೆ ಹೆಚ್ಚಿಸಿತ್ತು. ಅದರಲ್ಲೀಗ 10 ಪೈಸೆ ಕಡಿಮೆಯಾಗಿದೆ. ರಸ್ತೆ ಸಾರಿಗೆಯಲ್ಲೂ ದರ ಇಳಿಸುವ ಆಶ್ವಾಸನೆ ನೀಡಿದ್ದ ಸರಕಾರ ಈಗ ಅದರಲ್ಲೂ ಕಡಿಮೆ ಮಾಡಿದೆಯಂತೆ. ಹಿಂದೆ ರೂ 11-10 ಇದ್ದ ದರವನ್ನು ಈಗ ರೂ 11 ಮಾಡಿದಂತೆ ಹಾಗೆನೇ 10-20 ಪೈಸೆ ಕಡಿಮೆ ಮಾಡಿರುವ ವರದಿಗಳು ಬಂದಿವೆ. ಇದು ಹಾಸ್ಯಾಸ್ಪದವಾಗಿದೆ. ಇದು ಪ್ರಯಾಣಿಕರಿಗೆ ಮಾಡಿರುವ ಅವಮಾನ. ಇದನ್ನು ಸಹಿಸಲಾರದೆ ಕೆಲ ಪ್ರಯಾಣಿಕರು ಕಡಿಮೆ ಮಾಡಿದ 10 ಪೈಸೆ ಯನ್ನು ಮುಖ್ಯ ಮಂತ್ರಿಯವರಿಗೆ ರವಾನಿಸಿರುವ ವರದಿಗಳು ಪತ್ರಿಕೆಗಳಲ್ಲಿ ಬಂದಿವೆ. ಇದೇನು ಹುಡುಗಾಟವೇ ? ಸರಕಾರ ನಡೆಸುವ ಸಂಸ್ಥೆಗಳಲ್ಲಿ ನಷ್ಟವಾಗುತ್ತಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಇದರ ಬಗ್ಗೆ ಆಳವಾಗಿ ಶೋಧನೆ ನಡೆಸುವುದು ಅಗತ್ಯ. ದರ ಹೆಚ್ಚಳ ಮಾಡುವುದರಿಂದಲೇ ಆಗುತ್ತಿರುವ ನಷ್ಟವನ್ನು ತಪ್ಪಿಸಬಹುದೆಂದು ಸರಕಾರ ತಿಳಿದಿದರೆ ಇದೊಂದು ಭ್ರಮೆಯೇ ಸರಿ. ಈ ಸಂಸ್ಥೆಗಳಲ್ಲಿರುವ ಅಕ್ರಮಗಳನ್ನು ಹೋಗಲಾಡಿಸಿ, ಭ್ರಷ್ಟಾಚಾರಗಳನ್ನು ನಿಲ್ಲಿಸಿದರೆ ನಷ್ಟವನ್ನು ತಪ್ಪಿಸಬಹುದು

ಒತ್ತುವರಿ ಭೂಮಿ, ಹೆಚ್ಚುವರಿ ಭೂಮಿಯ ಹಂಚಿಕೆ, ಪಟ್ಟಾವಿತರಣೆ, ಬಡವರಿಗೆ ನಿವೇಶನ ಒದಗಿಸುವಿಕೆ, ಸ್ಟೈಪೆಂಡರಿಗಳ ಮತ್ತು ಶಿಕ್ಷಕರ ಪ್ರಶ್ನೆಗಳನ್ನೆಲ್ಲಾ ಬದಿಗೊತ್ತಿ ಈ ದರ ಏರಿಕೆಗಳ ಕ್ರಮ ಅನುಸರಿಸುತ್ತಿರುವುದು ಖಂಡನೀಯ. ಹೆಚ್ಚಿನ ಸಮಯ ಸರಕಾರ ಅಧಿಕಾರಿಗಳ ಮತ್ತು ನೌಕರರ ಟ್ರಾನ್ಸ್‌ಫರ್ ಗಳಲ್ಲೇ ಹೋಗುತ್ತಿದೆ ಆಡಳಿತೆಯಲ್ಲಿ ಹಿಂದಿನ ಕಾಂಗ್ರೆಸ್ ಸರಕಾರದಲ್ಲಿ ನಡೆಯುತ್ತಿದ್ದ ಅಕ್ರಮಗಳೇ ಮುಂದುವರಿಯುತ್ತಿದೆಂದು ಸಾಮಾನ್ಯ ಜನರಲ್ಲಿ ಅಭಿಪ್ರಾಯ ಬಂದಿದೆ. ಈ ಕ್ರಮಗಳು ಜನತೆಯಲ್ಲಿ ಅತೃಪ್ತಿಗೆ ಅವಕಾಶ ಕೊಡುವುದರಿಂದ ಇದರಲ್ಲಿ ಮೂಲಭೂತ ಬದಲಾವಣೆಗಳಾಗುವುದು ಅಗತ್ಯ

ಮುಂಬರುವ ಸರಕಾರದ ಆಯವ್ಯಯ ಪಟ್ಟಿಯಲ್ಲಿ (ಬಡ್ಜೆಟ್‌ನಲ್ಲಿ) ಸರಕಾರವು ಸಾಮಾನ್ಯ ಜನರಿಗೆ ಪರಿಹಾರ ಕೊಡುವುದೆಂದು ನಂಬುತ್ತೇವೆ

## ಬೆಳಗಾಂ ನಗರ ಮಹಾ ಪಾಲಿಕೆಯ ನಿರ್ಣಯ

ಹಿಂದೆ ಬೆಳಗಾಂ ಒಂದು ನಗರ ಸಭೆಯಾಗಿತ್ತು. ಜನತಾ ಸರ್ಕಾರ ಅದನ್ನೀಗ ನಗರ ಮಹಾ ಪಾಲಿಕೆಯನ್ನಾಗಿ ಮಾಡಿ ಇತ್ತೀಚಿಗೆ ಚುನಾವಣೆ ನಡೆಸಿತು ಇದು ಸ್ವಾಗತಾರ್ಹವಾದುದಾಗಿದೆ ಮತ್ತು ಪ್ರಜಾ ಪ್ರಭುತ್ವ ಕ್ರಮವಾಗಿದೆ. ಮೊನ್ನೆ ನಡೆದ ಚುನಾವಣೆಯೂ ಸರಿಯಾಗಿ ನಡೆದು ಅದರಲ್ಲಿ ಯಾವ ಪಕ್ಷಕ್ಕೂ ಬಹುಮತ ದೊರೆಯಲಿಲ್ಲ. ಘಟನಾತ್ಮಕವಾಗಿ ರಚಿತವಾದ ನಗರ ಕಾರ್ಪೋರೇಷನ್ ಸಭೆಯು ಕೆಲವು ದಿನಗಳ ಹಿಂದೆ ಸೇರಿ ಈ ಮಹಾ ನಗರವನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂಬ ನಿರ್ಣಯ ಮಾಡಿ ಎಲ್ಲರ ಗಮನವನ್ನು ಸೆಳೆದಿದೆ. ಈ ನಿರ್ಣಯವನ್ನು ರಾಜ್ಯದ ಅನೇಕ ಪಕ್ಷಗಳೂ. ವ್ಯಕ್ತಿಗಳೂ ಖಂಡಿಸಿರುತ್ತವೆ ಈ ನಿರ್ಣಯಕ್ಕಾಗಿ ಬೆಳಗಾಂ ನಗರ ಪಾಲಿಕೆಯನ್ನೇ ರದ್ದು ಮಾಡಬೇಕೆಂದೂ ಕೆಲವರು ಹೇಳಿದ್ದಾರೆ. ಈ ವಿಷಯವು ಶಾಸನ ಸಭೆಯಲ್ಲಿ ಬಂದಾಗ ಮುಖ್ಯ ಮಂತ್ರಿಯವರು ದೀರ್ಘ ಉತ್ತರವನ್ನು ನೀಡಿ ಬೆಳಗಾಂ ಕರ್ನಾಟಕ ರಾಜ್ಯದಲ್ಲೇ ಮುಂದುವರಿಯುವುದೆಂಬ ಭರವಸೆ ನೀಡಿದ್ದಾರೆ.

ಜನತೆಯಿಂದ ಆರಿಸಲ್ಪಟ್ಟ ಪ್ರತಿನಿಧಿಗಳಿಂದ ಕೂಡಿದ ಬೆಳಗಾಂ ನಗರ ಪಾಲಿಕೆಯು ಬಹುಮತದಿಂದ ಮಾಡಿದ ನಿರ್ಣಯವನ್ನು ಧಿಕ್ಕರಿಸುವದರಿಂದ ಸಮಸ್ಯೆ ಬಗೆ ಹರಿಯುವುದೇ ಎಂಬುದರ ಬಗ್ಗೆ ಗಂಭೀರವಾಗಿ ಯೋಚಿಸುವುದು ಅಗತ್ಯ. 1956 ರಲ್ಲಿ ರಾಜ್ಯಗಳ ಪುನರ್‌ರಚನೆಯಾದಾಗ ಅನೇಕ ಕಡೆಗಳಲ್ಲಿ ಗಡಿ ಪ್ರಶ್ನೆಗಳು ಉದ್ಭವಿಸಿದುವು. ಪುನರ್‌ರಚನೆ ಮಾಡುವಾಗ, ಗಡಿಗಳನ್ನು ನಿರ್ಧರಿಸುವಾಗ ಕೇಂದ್ರ ಸರಕಾರ ವೈಜ್ಞಾನಿಕವಾದ ನೀತಿಯನ್ನು ಅನುಸರಿಸಿಲ್ಲವೆಂದು ಎಲ್ಲರಿಗೂ ತಿಳಿದಿದೆ. ಸರಕಾರದ ಸಂದರ್ಭ ಸಾಧಕ ನೀತಿಯ ಫಲವಾಗಿ ಕನ್ನಡ ಬಹು ಸಂಖ್ಯಾತ ಅನೇಕ ಪ್ರದೇಶಗಳು ನೆರೆ ರಾಜ್ಯಗಳಲ್ಲಿ ಸೇರಿದ್ದು ನಮ್ಮ ರಾಜ್ಯಕ್ಕೆ ಅನ್ಯಾಯವಾಗಿರುವುದನ್ನು ನಮ್ಮ ಪಾರ್ಟಿಯು ಅನೇಕ ಬಾರಿ ಹೇಳಿದೆ. ಗಡಿ ನಿರ್ಣಯದಲ್ಲಿ ಒಂದು ನಿರ್ದಿಷ್ಟ ಧೋರಣೆ ಅಗತ್ಯವೆಂದು ನಮ್ಮ ಪಾರ್ಟಿ ವಾದ ಮಾಡಿ ಒಂದು ಸೂತ್ರವನ್ನು ಮಂಡಿಸಿದೆ. ಅದರಂತೆ ಗ್ರಾಮ ಘಟಕವನ್ನಾಗಿ ತೆಗೆದುಕೊಂಡು ಅದರಲ್ಲಿ ಯಾವುದೆ ಭಾಷೆಯನ್ನಾಡುವ ಜನ ಬಹುಮತದಲ್ಲಿದ್ದಾರೆಂದು ನೋಡಿ ಅದು ಆ ಭಾಷೆಯ ಪ್ರಾಂತಕ್ಕೆ ಹೊಂದಿಕೊಂಡಿದ್ದರೆ ಆ ಗ್ರಾಮವನ್ನು ಆ ಪ್ರಾಂತಕ್ಕೆ ಸೇರಿಸಬೇಕೆಂಬುದೇ ಈ ಸೂತ್ರ. ಇದನ್ನು ಸರಕಾರ ಒಪ್ಪಲಿಲ್ಲ. ಇತರ ಪಕ್ಷಗಳೂ ಒಪ್ಪಲಿಲ್ಲ ಇದರಿಂದ ಗಡಿ ಪ್ರದೇಶಗಳಲ್ಲಿ ವಿವಾದಗಳು ಮುಂದುವರಿಯುತ್ತಿವೆ ಬಲಾತ್ಕಾರದಿಂದ ಈ ಸಮಸ್ಯೆಯನ್ನು ಬಗೆ ಹರಿಸಲು ಸಾಧ್ಯವಿಲ್ಲ. ಜನರ ಮನಸ್ಸನ್ನು ಒಲಿಸಲು ಪ್ರಯತ್ನಿಸಬೇಕು ಮತ್ತು ವೈಜ್ಞಾನಿಕ ರೀತಿಯಲ್ಲಿ ಸಮಂಜಸವಾದ ಸೂತ್ರದ ಆಧಾರದಲ್ಲಿ ಪರಿಹರಿಸಬೇಕು

ಬಹು ಸಂಖ್ಯ ಕನ್ನಡಿಗರಿರುವ ಪ್ರದೇಶಗಳು ಕರ್ನಾಟಕಕ್ಕೆ ಬರಬೇಕೆಂದು ನಾವು ಮೊದಲಿಂದಲೂ ಹೇಳುತ್ತಿದ್ದೇವೆ. ಈ ಗಡಿ ಪ್ರಶ್ನೆಯ ಬಗ್ಗೆ ಜನತನ್ನು ಉದ್ರೇಕಗೊಳಿಸುವುದನ್ನು ನಾವು ಖಂಡಿಸುತ್ತೇವೆ. ಮಾತುಕತೆಯ ಮೂಲಕವೇ ಇದಕ್ಕೆ ಪರಿಹಾರ ಹುಡುಕುವುದು ಅಗತ್ಯ. ಘೋಷಣೆಗಳಿಂದಾಗಿಲಿ ಸಮಸ್ಯೆ ಬಗೆ ಹರಿಯದು.

ಚುನಾಯಿತ ಬೆಳಗಾಂ ನಗರ ಸಭೆಯನ್ನು ಈ ನಿರ್ಣಯ ಮಾಡಿದ ಕಾರಣಕ್ಕಾಗಿ ವಿಸರ್ಜನೆ ಮಾಡಬೇಕೆನ್ನುವುದರಲ್ಲಿ ಅರ್ಥವಿಲ್ಲ. ಚುನಾಯಿಸಲ್ಪಟ್ಟ ಪ್ರತಿನಿಧಿಗಳು ಭಾಷೆಯ ಪ್ರಶ್ನೆಯನ್ನು ಬದಿಗಿಟ್ಟು ಜನರ ಸಮಸ್ಯೆಗಳತ್ತ ಗಮನ ಹರಿಸಿ ನಗರಾಭಿವೃದ್ಧಿಗೆ ಪ್ರಯತ್ನ ಮಾಡಲಿ. ಕನ್ನಡಿಗರಾಗಲಿ ಮರಾಠಿಯವರಾಗಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸುವಾಗ ಭಾವೋದ್ರೇಕಕ್ಕೆ ಅವಕಾಶ ಕೊಡದೆ ಸಂಯಮದಿಂದ ವರ್ತಿಸಲೆಂದು ನಮ್ಮ ಅಭಿಪ್ರಾಯ

ಈ ಸಂದರ್ಭದಲ್ಲಿ ಮೂರನೇ ಮತ್ತು ನಾಲ್ಕನೇ ದರ್ಜೆ ನೌಕರರನ್ನು ಸರಕಾರವು ನೇಮಕಾತಿ ಮಾಡುವಾಗ ಕನ್ನಡ ಭಾಷೆಯನ್ನು ಕಡ್ಡಾಯ ಮಾಡ ಬೇಕೆನ್ನುವ ಪ್ರಶ್ನೆಯ ಬಗ್ಗೆ ನಮ್ಮ ಪಾರ್ಟಿಯ ನಿಲುವನ್ನು ಪುನಃ ಹೇಳಲಿಚ್ಛಿಸುತ್ತೇವೆ. ಆಡಳಿತ ಭಾಷೆಯು ಕನ್ನಡವೆಂದಾಗ ಸರಕಾರಿ ನೌಕರರು ಕನ್ನಡ ಬಲ್ಲವರಿರಬೇಕೆನ್ನುವುದರಲ್ಲಿ ಯಾವ ಭಿನ್ನಾಭಿಪ್ರಾಯವಿರಲೂ ಸಾಧ್ಯವಿಲ್ಲ. ಆದರೆ ಇಷ್ಟು ವರ್ಷಗಳಿಂದ ಕನ್ನಡ ಅಭ್ಯಾಸವು ನಮ್ಮ ರಾಜ್ಯದಲ್ಲಿ ಕಡ್ಡಾಯವಾಗಿರದಿದ್ದರಿಂದ ಅನೇಕರಿಗೆ ಕನ್ನಡ ಕಲಿಯಲು ಅವಕಾಶ ಇರಲಿಲ್ಲ. ಏಕಾಏಕಿಯಾಗಿ ಈ ನಿಯಮವನ್ನು ಜಾರಿಗೆ ತರುವುದರಿಂದ ಕನ್ನಡೇತರ ಅಲ್ಪ ಸಂಖ್ಯಾತರಿಗಷ್ಟೇ ಅಲ್ಲದೆ ಸಂಸ್ಕೃತ ಮುಂತಾದ ಭಾಷೆಗಳನ್ನು ತೆಗೆದುಕೊಂಡು. ಓದಿದ ಕನ್ನಡ ವಿದ್ಯಾರ್ಥಿಗಳಿಗೂ ತೊಂದರೆಯಾಗಿದೆ. ಆದ್ದರಿಂದ ಸರಕಾರಿ ಕೆಲಸಕ್ಕೆ ನೇಮಕಾತಿ ಮಾಡುವಾಗ ಇದನ್ನು ಕಡ್ಡಾಯ ಮಾಡದೆ ಒಂದೆರಡು ವರ್ಷಗಳ ನಂತರ ಅವರನ್ನು ಖಾಯಂಗೊಳಿಸುವಾಗ ಕನ್ನಡ ಕಡ್ಡಾಯಗೊಳಿಸ ಬೇಕೆನ್ನುವ ಸರಕಾರದ ನೀತಿ ನ್ಯಾಯವಾದುದಾಗಿದೆ. ಕೆಲವು ಸಮಯ ಇದು ಅಗತ್ಯವಾಗಿದೇ. ಕೆಲವು ವರ್ಷಗಳ ನಂತರ ಇದು ಬೇಕಾಗಿರಲಿಕ್ಕಿಲ್ಲ. ಯಾಕೆಂದರೆ ಶಿಕ್ಷಣದಲ್ಲಿ ಆರಂಭದಿಂದಲೇ ಕನ್ನಡವನ್ನು ಕಡ್ಡಾಯಗೊಳಿಸಿದ್ದರಿಂದ ಸರಕಾರಿ ಕೆಲಸಕ್ಕೆ ಹೋಗುವವರಿಗೆ ಕನ್ನಡ ಗೊತ್ತೇ ಇರುತ್ತದೆ. ಆಗ ಈ ರಿಯಾಯಿತಿ ಬೇಕಾಗಿರುವುದಿಲ್ಲ. ಆದ್ದರಿಂದ ಈ ಮಧ್ಯ ಕಾಲಾವಧಿಯಲ್ಲಿ ಈ ರಿಯಾಯಿತಿ ಇರಕೂಡದೆನ್ನುವುದರಿಂದ ಅನೇಕ ವಿಭಾಗದವರಿಗೆ ಅನ್ಯಾಯ ಮಾಡಿದಂತಾಗುವುದು, ಇದರಿಂದ ಜಾತಿ-ಭಾಷೆ ವೈಷಮ್ಯಗಳಿಗೆ ಅವಕಾಶ ದೊರೆಯುವುದು ರಾಜ್ಯದ ಹೊರಗಿರುವ ಸುಮಾರು 50 ಲಕ್ಷ ಕನ್ನಡಿಗರಿಗೆ ತೊಂದರೆಯಾಗುವ ಅಪಾಯವೂ ಇದೆ. ಬೊಂಬಾಯಿಯಲ್ಲಿ ಶಿವಸೇನೆಯು ಈಗಾಗಲೇ ರಣಕಹಳೆಯನ್ನೊದಿದೆ. ಎಲ್ಲ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಐಕ್ಯತೆಗೆ ಭಂಗ ಬಾರದಂತೆ ಎಚ್ಚರಿಕೆ ವಹಿಸಿ ಮುಂದುವರಿಯುವುದು ಅಗತ್ಯ. ಡಾ॥ ರಾಜ್‌ಕುಮಾರರು ಮುಖ್ಯ ಮಂತ್ರಿಯವರೊಂದಿಗೆ ನಡೆಸುವ ಮಾತುಕತೆ ಈ ದೃಷ್ಟಿಯಿಂದ ಸಫಲವಾಗಲೆಂದು ನಾವ ನಂಬಿದ್ದೇವೆ.

# ಕರ್ನಾಟಕದ ರಾಜಕೀಯ ಪರಿಸ್ಥಿತಿಯ ಕುರಿತು

## ಪಾರ್ಟಿ ರಾಜ್ಯ ಸಮಿತಿಯ ನಿಲುವು

ಇದೀಗ ಶ್ರೀ ರಾಮಕೃಷ್ಣ ಹೆಗಡೆಯವರ ನೇತೃತ್ವದ ಜನತಾ ಸರಕಾರವು ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದು ಒಂದು ವರ್ಷ ಮುಗಿದಿದೆ. ಈ ಒಂದು ವರ್ಷದಲ್ಲಿ ಕಾಂಗ್ರೆಸ್ಸೇತರ ಸರಕಾರವೊಂದು ಪ್ರಪ್ರಥಮ ಕರ್ನಾಟಕ ರಾಜ್ಯದಲ್ಲಿ ಕರ್ನಾಟಕದ ಆರ್ಥಿಕ ಸಾಮಾಜಿಕ ರಾಜಕೀಯ ಕ್ಷೇತ್ರದಲ್ಲಿ ಏನನ್ನು ಸಾಧಿಸಿದೆ ಎಂಬುದರ ಕುರಿತು ವಿಶ್ಲೇಷಣೆ ಮಾಡುವುದು ಅದರಲ್ಲೂ ಈ ಸರಕಾರಕ್ಕೆ ಭಾರತ ಮಾರ್ಕ್ಸವಾದಿ ಕಮ್ಯುನಿಸ್ಟ್ ಪಕ್ಷವು ಬೆಂಬಲ ಕೊಡುತ್ತಿರುವುದರಿಂದ ಬಹಳ ಅವಶ್ಯಕವೂ ಸಮಂಜಸವೂ ಆಗಿದೆ.

ಪಶ್ಚಿಮ ಬಂಗಾಳ, ತ್ರಿಪುರ, ಜಮ್ಮು ಮತ್ತು ಕಾಶ್ಮೀರ, ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳಲ್ಲಿರುವ ಕಾಂಗ್ರೆಸ್ಸೇತರ ಸರಕಾರಗಳ ಸಾಲಿನಲ್ಲಿ ಇನ್ನೊಂದು ಕಾಂಗ್ರೆಸ್ಸೇತರ ಸರಕಾರವು ಅದೂ ರಾಷ್ಟ್ರೀಯ ಪಕ್ಷಗಳಲ್ಲಿ ಒಂದಾದ ಜನತಾ ಪಕ್ಷದ ನೇತೃತ್ವದಲ್ಲಿ ಸರಕಾರವು ಅಧಿಕಾರಾರೂಢವಾಗಿರುವುದು ರಾಜ್ಯದ ರಾಜಕೀಯದಲ್ಲಿ ಮಾತ್ರವಲ್ಲ ದೇಶದ ರಾಜಕೀಯದಲ್ಲಿ ಒಂದು ಮುಖ್ಯ ಘಟನೆಯಾಗಿದೆ 35 ವರ್ಷಗಳ ಕೇಂದ್ರೀಕೃತ ಕಾಂಗ್ರೆಸ್ಸು ಆಡಳಿತೆಯ ಫಲವಾಗಿ ರಾಜ್ಯಗಳ ಸಂವಿಧಾನಾತ್ಮಕ ಅಧಿಕಾರಗಳಿಗೆ, ಅದರಲ್ಲೂ ಹಣಕಾಸು ಮೂಲಗಳಿಗೆ, ಧಕ್ಕೆ ಬಂದಿದ್ದು ಕಾಂಗ್ರೆಸ್ಸ (ಐ) ರಾಜಕೀಯ ಸರಕಾರಗಳೂ ಸೇರಿದ ಎಲ್ಲಾ ರಾಜ್ಯಗಳೂ ಅತ್ಯಂತ ಕಷ್ಟದ ಹಣಕಾಸಿನ ಪರಿಸ್ಥಿತಿಗೆ ದೂಡಲ್ಪಟ್ಟು ಅವಶ್ಯಕವಾದ ಜನಹಿತ ರಕ್ಷಣಾ ಕಾರ್ಯಗಳನ್ನು ಮಾಡಲು ಚಡಪಡಿಸುತ್ತಿರುವಾಗ, ರಾಜ್ಯ-ಕೇಂದ್ರದ ಸಂಬಂಧಗಳಲ್ಲಿ ಸೂಕ್ತ ಬದಲಾವಣೆಯಾಗಬೇಕೆಂಬ ಬೇಡಿಕೆಗೆ ಇತರ ಕಾಂಗ್ರೆಸ್ಸೇತರ ಎಡರಂಗ ಸರಕಾರಗಳು ಹೋರಾಡುತ್ತಿರುವಾಗ ಶ್ರೀ ರಾಮಕೃಷ್ಣ ಹೆಗ್ಗಡೆಯವರ ಸರಕಾರದಿಂದ ಈ ಕ್ರಮಕ್ಕೆ ತುಂಬಾ ಒತ್ತಾಸೆ ಸಿಕ್ಕಿದೆ ಸ್ವತಃ ಹೆಗ್ಗಡೆಯವರು ಈ ದಿಸೆಯಲ್ಲಿ ಸರಿಯಾದ ರಾಷ್ಟ್ರೀಯ ನಿಲುವು ತೆಗೆದುಕೊಂಡು ಕಾರ್ಯವೆಸಗುತ್ತಿದ್ದಾರೆ.

ರಾಜ್ಯದಲ್ಲಿ ಪುರ ಸಭೆಗಳಿಗೂ, ಮಹಾನಗರ ಪಾಲಿಕೆಗಳಿಗೂ 12 ವರ್ಷಗಳಿಂದ ಕಾಂಗ್ರೆಸ್ಸು (ಐ) ಆಡಳಿತೆಯಡಿಯಲ್ಲಿ ನಡೆಯದಿದ್ದ ಚುನಾವಣೆಗಳನ್ನು ನಡೆಸಿ ಹೆಗ್ಗಡೆ ಸರಕಾರವು ರಾಜ್ಯದ ಜನತೆಯ ವಿಶ್ವಾಸಕ್ಕೆ ಪಾತ್ರವಾಗಿದೆ. ಮಂಡಳ ಪಂಚಾಯತ್ ಮತ್ತು ಜಿಲ್ಲಾ ಪರಿಷತ್‌ಗಳನ್ನು ಹೊಸ ಚುನಾವಣೆಗಳ ಮೂಲಕ ಸೃಷ್ಟಿಸಿ, ಹೆಚ್ಚು ಅಧಿಕಾರಗಳನ್ನೂ, ಹಣದ ಮೂಲಗಳನ್ನು ಒದಗಿಸಲು ಜನತಾ ಸರಕಾರವು ಕ್ರಮಗಳನ್ನು ಕೈಗೊಂಡಿರುವುದು ಅಧಿಕಾರ ಕೇಂದ್ರೀಕರಣದ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಾಗಿದೆ.

ಕಾಂಗ್ರೆಸ್ಸು (ಐ) ಸರಕಾರವು 26 ಕೈಗಾರಿಕೆಗಳಲ್ಲಿ ಕನಿಷ್ಟ ಕೂಲಿ ನಿರ್ಧರಿಸುವುದರಲ್ಲಿ ತೀರಾ ವಿಫಲಗೊಂಡಿರುವ ಗೊಂದಲದ ಪರಿಸ್ಥಿತಿಯನ್ನು ಬಿಡಿಸಿ ಇದೀಗ ಎಲ್ಲಾ ಕೈಗಾರಿಕೆಗಳಲ್ಲಿ ಸೂಕ್ತ ಕನಿಷ್ಟ ಕೂಲಿಗಳನ್ನು ನಿರ್ಧರಿಸುವ ದಿಟ್ಟ ಹೆಜ್ಜೆಯನ್ನು ರಾಮಕೃಷ್ಣ ಹೆಗ್ಗಡೆಯವರ ಸರಕಾರವು ಇಟ್ಟಿರುವುದು ಸ್ವಾಗತಾರ್ಹ.

ರಾಜ್ಯದಲ್ಲಿ 14 ಜಿಲ್ಲೆಗಳಲ್ಲಿ ಹಿಂದೆಂದೂ ಇಲ್ಲದ ಬರಗಾಲ ಬಂದಾಗ ನೀರನ್ನೂ ಪರಿಹಾರವನ್ನೂ ಒದಗಿಸುವುದರಲ್ಲಿ ಹೆಗ್ಗಡೆಯವರ ಸರಕಾರವು ಅತ್ಯಂತ ಕಾಳಜಿ ವಹಿಸಿತ್ತು ಎಂಬುದನ್ನು ಇಲ್ಲಿ ನೆನಪು ಮಾಡಬೇಕಾಗಿದೆ.

ರಾಜ್ಯದಲ್ಲಿ ಅಲ್ಪಸಂಖ್ಯಾತರ ಆಯೋಗ ಮತ್ತು ಹಿಂದುಳಿದ ವರ್ಗಗಳ 2ನೇ ಆಯೋಗಗಳನ್ನು ರಚಿಸಿ ಅಲ್ಪ ಸಂಖ್ಯಾತರ ಮತ್ತು ಹಿಂದುಳಿದ ವರ್ಗಗಳಿಗೆ ಸಂವಿಧಾನ ಬದ್ಧವಾಗಿಯೇ ಕೆಲವು ನಿರ್ದಿಷ್ಟ ಸವಲತ್ತುಗಳು ಸಿಗುವಂತೆ ಮಾಡುವ ಉತ್ಕಟೇಚ್ಛೆಯನ್ನು ಜನತಾ ಸರಕಾರವು ಕಾರ್ಯತಃ ವ್ಯಕ್ತಪಡಿಸಿದೆ ಈ ವರ್ಗಗಳು ಯಾವಾಗಲೂ ಆಳುವ ರಾಜಕೀಯ ಪಕ್ಷಗಳ ಬಾಲಬಡುಕರಾಗಿ ಚುನಾವಣಾ ಬ್ಯಾಂಕುಗಳಾಗಿರುವುದನ್ನು ತಪ್ಪಿಸಿ ಇತರ ನಾಗರಿಕರ ಸರಿಸಮಾನರಾಗಿ ಮಾಡುವ ಉದ್ಧಿಶ್ಯ ಇದರಲ್ಲಿ ಸೇರಿರುತ್ತದೆ.

ರೈತರಿಗೆ ರೂ 50 ಕೋಟಿಯಷ್ಟು ಸವಲತ್ತುಗಳನ್ನು ಕೊಟ್ಟುದು, ರೈತ-ಕಾರ್ಮಿಕರ ಚಳವಳಿಗಳಲ್ಲಿ ಹೊರಿಸಲ್ಪಟ್ಟ ಕೇಸುಗಳನ್ನು ಹಿಂದೆಗೆಯಲು ತೀರ್ಮಾನಿಸಿದುದು, ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ಮಸೂದೆಯನ್ನು ಮುಂತರಲು ಶತ ಪ್ರಯತ್ನ ಮಾಡುತ್ತಿರುವುದು, ಭ್ರಷ್ಟಾಚಾರ ತಡೆಗಟ್ಟಲು ಮುಖ್ಯ ಮಂತ್ರಿಗಳನ್ನೂ ಸೇರಿಸಿ ತನಿಖೆ ಮಾಡಿ ಕೇಸು ದಾಖಲು ಮಾಡಲು ಅಧಿಕಾರವುಳ್ಳ ಲೋಕಾಯುಕ್ತ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಿದುದು ಪಕ್ಷಾಂತರವನ್ನು ನಿಷೇಧ ಮಾಡುವ ಮಸೂದೆಯನ್ನು ರಚಿಸಿರುವುದು ಇವೆಲ್ಲಾ ಈ ಸರಕಾರವು ನಡೆದು ಹೋಗುತ್ತಿರುವ ದಿಕ್ಕು ಜನಸಾಮಾನ್ಯರಿಗೆ ಅಲ್ಪಸ್ವಲ್ಪ ಅನುಕೂಲವಾಗುವ ಆಡಳಿತೆಯನ್ನು ಒದಗಿಸುವ ದಿಕ್ಕಿನಲ್ಲಿದೆ ಎಂಬುದನ್ನು ತೋರಿಸುತ್ತದೆ.

ಆದರೆ ಈ ಜನತಾ ಸರಕಾರವು ಕೂಡಾ ಪಟ್ಟಭದ್ರ ಹಿತಾಸಕ್ತಿಗಳ ವರ್ಗಗುಣದ ಸರಕಾರವಾಗಿರುವುದರಿಂದ, ಕಾರ್ಮಿಕ ಹೋರಾಟಗಳ ಬಗ್ಗೆ, ಕೈಗಾರಿಕಾ ಪ್ರಶ್ನೆಗಳ ಬಗ್ಗೆ ಸ್ವಲ್ಪ ಸ್ಪಷ್ಟವಾದ ನಿಲುವುಗಳನ್ನು ಅನುಸರಿಸಲು ಸಾಧ್ಯವಾಗುತ್ತಿಲ್ಲ. ಪೋಲೀಸ ಅತಿರೇಕವನ್ನು ಹೆಚ್ಚಾಗಿ ತಡೆಯಲು ಸಾಧ್ಯವಾಗುತ್ತಿಲ್ಲ. ಲಾಕ್ ಔಟ್, ಕ್ಲೋಶರ್, ರಿಟ್ರೆಂಚ್ ಮೆಂಟ್‌ನ್ನು ನಿಲ್ಲಿಸಲು ದೃಢವಾದ ಯಾವ ಕ್ರಮಗಳನ್ನು ವಹಿಸಲು ಮುಂದಾಗುತ್ತಿಲ್ಲ.

ದರ್ಖಾಸ್ತು ಭೂಮಿ ಹಂಚಿಕೊಡುವಂತಹ ಅತಿ ಹಳೆಯ ಘೋಷಣೆಯನ್ನು ಜ್ಯಾರಿಗೊಳಿಸುವುದರಲ್ಲಿ ಸರಕಾರವು ಕೊಟ್ಟ ಹೇಳಿಕೆಗಳು ಸ್ವಾಗತಾರ್ಹವಾದರೂ, ಭೂರಹಿತ ಮತ್ತು ಬಡ ರೈತರಿಗೆ ಇಂತಹ ಭೂಮಿಯ ಸಾಗುವಳಿಯನ್ನು ಅವರು ದೀರ್ಘ ಕಾಲದಿಂದ ಮಾಡುತ್ತಿರುವುದಾದರೂ ಅವರಿಗೆ ಆ ಜಮೀನಿನ ಹಕ್ಕು ಕೊಡುವುದರಲ್ಲಿ ಸರಕಾರಿ ಯಂತ್ರವು ವಿಫಲವಾಗಿದೆ. ಅವರಿಗೆ ಈ ಭೂಮಿಯ ಮೇಲೆ ಒಡೆತನದ ಹಕ್ಕನ್ನು ಪುಕ್ಕಟೆಯಾಗಿ ಕೂಡಲೇ ಕೊಡುವ ವ್ಯವಸ್ಥೆಯನ್ನು ಮಾಡಬೇಕು ಅದೇ ಸಮಯದಲ್ಲಿ ಶ್ರೀಮಂತ ಭೂಮಾಲಕರಿಗೂ, ಕಾಫಿ, ಚಾ ಮತ್ತಿತರ ತೋಟ ಮಾಲಕರಿಗೆ ಅವರ ವಶದಲ್ಲಿ ಅಕ್ರಮವಾಗಿರುವ ಸರಕಾರಿ ಭೂಮಿಯನ್ನು ಸರಕಾರವೇ ವಶಪಡಿಸಿ ಕೊಳ್ಳಲು ಮುಂದಾಗಬೇಕು.

ಬೆಲೆಯೇರಿಕೆಯಿಂದ ಜನರನ್ನು ರಕ್ಷಣೆ ಮಾಡಲು ವಿಸ್ತೃತ ನೆಲೆಯಲ್ಲಿ ರಾಜ್ಯದಾದ್ಯಂತ ಸಾರ್ವಜನಿಕ ಕ್ಷೇತ್ರದಲ್ಲಿ ಸಾರ್ವಜನಿಕ ವಿತರಣೆ ಕೇಂದ್ರಗಳನ್ನು ತೆರೆದು, ಅಕ್ಕಿ ಮಾತ್ರವಲ್ಲ ಎಲ್ಲಾ ಅವಶ್ಯಕವಸ್ತುಗಳು ನ್ಯಾಯಬೆಲೆಗಳಲ್ಲಿ ಪೇಟೆಗಳ ಜನತೆಗೆ ಮಾತ್ರವಲ್ಲ, ಗ್ರಾಮಾಂತರದ ಜನತೆಗೂ ದೊರೆಯುವಂತೆ ಮಾಡುವ ನೀತಿಯೂ, ಕೇರಳದಲ್ಲಿ ಇ. ಕೆ. ನಯನಾರರ ಸರಕಾರವು ಯಶಸ್ವಿಯಾಗಿ ಮಾಡಿದಂತೆ ಮಾಡಲು ದೃಢವಾದ ಕ್ರಮಗಳನ್ನು ಕೂಡಲೇ ಅನುಸರಿಸಬೇಕು, ಮಿಲ್ಲು ಮಾಲಕರು ಮತ್ತು ಸಗಟು ವ್ಯಾಪಾರಸ್ಥರ ಬ್ಲಾಕ್ ಮೇಲ್ ನೀತಿಗಳಿಗೆಯಾವುದೇ ಸೊಪ್ಪು ಹಾಕಬಾರದು ರೈತರ ಬೆಳೆಗಳನ್ನು ಸರಕಾರವು ನೇರವಾಗಿ ಬೆಂಬಲಿತ ಬೆಲೆಗಳನ್ನು ಕೊಟ್ಟು ಸಂಗ್ರಹಿಸಬೇಕು.

ಈ ಸಂದಿಗ್ಧ ಪರಿಸ್ಥಿತಿಯನ್ನು ದುರುಪಯೋಗ ಪಡಿಸಿಕೊಂಡು ಸರಕಾರವನ್ನು ಇಕ್ಕಟ್ಟಿನಲ್ಲಿ ಸಿಲುಕಿಸಲು ನೋಡುವ ಬಿ. ಜೆ ಪಿ ಯವರ ನೀತಿಯು ಕಾಂಗ್ರೆಸ್ (ಐ) ಕ್ರಮಗಳಂತೆ ಖಂಡನೀಯ.

ಬಿ ಜೆ ಪಿ ಯವರ ಸಹಾಯ ಸರಕಾರಕ್ಕೆ ಅಗತ್ಯವಿದ್ದಾಗ್ಯೂ ಅವರ ಸಂಕುಚಿತ ಜಾತೀಯವಾದೀ ನಿಲುವುಗಳಿಗೆ ಮಣಿಯದ ಹಾಗೆ ಜಾಗ್ರತೆ ವಹಿಸಬೇಕಾಗಿದೆ

ಜನರ ಸಮಸ್ಯೆಗಳನ್ನು ಪರಿಹರಿಸುವ ಪರ್ಯಾಯ ಧೋರಣೆಗಳನ್ನು ಅನುಸರಿಸಲು ಸಾಧ್ಯವಾದರೆ ಮಾತ್ರ, ಜನತೆಗೆ ಈ ಪರ್ಯಾಯ ಧೋರಣೆಗಳ ಪ್ರಯೋಜನವನ್ನು ತೋರಿಸಲು ಸಾಧ್ಯವಾದರೆ ಮಾತ್ರ ಈ ದಿಕ್ಕಿನಲ್ಲಿ ಸತತವಾದ ಮತ್ತು ದೃಢವಾದ ಪ್ರಯತ್ನಗಳನ್ನು ಎಲ್ಲಾ ರೀತಿಯ ಒತ್ತಡಗಳನ್ನು ಮೀರಿ ನಡೆಸಲಾಗುತ್ತಿದೆ ಎಂಬುದನ್ನು ರಾಜ್ಯದ ಜನತೆ ಕಾಣುವಂತಾದರೆ ಮಾತ್ರ ಶ್ರೀ ರಾಮಕೃಷ್ಣ ಹೆಗಡೆಯವರ ಸರಕಾರ ಉಳಿದೀತು. ಒಂದು ವೇಳೆ ಬೀಳಿಸಲ್ಪಟ್ಟರೂ ಎರಡು ಪಾಲು ಶಕ್ತಿಯಿಂದ ಅಧಿಕಾರಕ್ಕೆ ಪುನಃ ಬರಬಹುದು

ಅದೇ ಸಮಯದಲ್ಲಿ ಅಧಿಕಾರವನ್ನು ಕಳೆದು ಕೊಂಡ ನಂತರ ಹುಚ್ಚುನಾಯಿಗಳ ಹಾಗೆ ವರ್ತಿಸುತ್ತಿರುವ ಕಾಂಗ್ರೆಸ್ (ಐ) ಪಕ್ಷದ ಮುಂದಾಳುಗಳ ವರ್ತನೆಯು ತೀರಾ ಖಂಡನೀಯ ತಮ್ಮ ಶಕ್ತಿಯನ್ನು ವಿಧಾನ ಸಭೆಯ ಒಳಗಡೆ ಚರ್ಚೆಯ ವೇಳೆಯೂ, ಮತದಲ್ಲೂ, ಸಾಧ್ಯವಿದ್ದರೆ "ಅವಿಶ್ವಾಸ ಠರಾವು" ತರುವುದರಲ್ಲಿ ತೋರಿಸುವ ಬದಲು, ಕೋಟ್ಯಂತರ ಹಣದ ಪ್ರದರ್ಶನ ಮಾಡಿ, ಇಲ್ಲಸಲ್ಲದ, ಆಮಿಷ ತೋರಿಸಿ, ದಿಲ್ಲಿಯ ಅಧಿಕಾರ ತೋರಿಸಿ, ನ್ಯಾಯೋಚಿತವಾಗಿ ಅಧಿಕಾರಕ್ಕೆ ಬಂದ ಸರಕಾರವನ್ನು ಉರುಳಿಸುವ ನೀತಿಯು ತೀರಾ ಖಂಡನೀಯ ಮತ್ತು ಪ್ರಜಾಪ್ರಭುತ್ವಕ್ಕೇನೇ ಮಾರಕವಾಗಿದೆ.

ಭಾರತ ಮಾರ್ಕ್ಸವಾದಿ ಕಮ್ಯುನಿಸ್ಟ್ ಪಕ್ಷವು ನಿಶ್ಶರ್ತವಾಗಿ ಶ್ರೀ ರಾಮಕೃಷ್ಣ ಹೆಗಡೆಯವರ ಸರಕಾರಕ್ಕೆ ಬೆಂಬಲ ವ್ಯಕ್ತಪಡಿಸುತ್ತಿರುವಾಗಲೇ, ಈ ಸರಕಾರವು ಜನಸಾಮಾನ್ಯರ ದಿನನಿತ್ಯ ಮತ್ತು ಮೂಲಭೂತ ಸಮಸ್ಯೆಗಳ ಪರಿಹರಿಸುವ ದಿಕ್ಕಿನಲ್ಲಿ ಸೂಕ್ತವಾದ ಮತ್ತು ದೃಢವಾದ ಕ್ರಮಗಳನ್ನು ಅನುಸರಿಸುತ್ತಾ ಬರುವಂತೆ ಮಾಡಲು ಬೇಕಾದ ಎಲ್ಲಾ ಜನತಾ ಚಳವಳಿಗಳನ್ನು ನಡೆಸಲು ಮುಂದಾಗಬೇಕಾಗಿದೆ ಪ್ರತಿಯೊಂದು ಜಿಲ್ಲೆಯಲ್ಲೂ ಈ ದಿಸೆಯಲ್ಲಿ ಇನ್ನಷ್ಟು ತೀವ್ರತರವಾಗಿ ಜನರ ಪ್ರಶ್ನೆಗಳ ಆಧಾರದಲ್ಲಿ ಚಳವಳಿಯನ್ನು ನಡೆಸಲು ಮುಂದಾಗ ಬೇಕೆಂದು ತನ್ನ ಪಕ್ಷದ ಘಟಕಗಳಿಗೆ ಕರೆ ಕೊಡುತ್ತದೆ

ಕಲ್ಕತ್ತಾದಲ್ಲಿ ನಡೆಯುವ ವಿರೋಧ ಪಕ್ಷಗಳ ಸಂಯುಕ್ತ ಸಭೆಯಲ್ಲಿ ಬೆಲೆಯೇರಿಕೆ ನಿರುದ್ಯೋಗ ಇತ್ಯಾದಿ ವಿಷಯದಲ್ಲಿ ಕೈಗೊಳ್ಳ ಬಹುದಾದ ತೀರ್ಮಾನಗಳನ್ನು ಜಾರಿಗೊಳಿಸಲು ಪ್ರಜಾಸತ್ತಾತ್ಮಕ ವಿರೋಧ ಪಕ್ಷಗಳನ್ನು ಸೇರಿಸಿ ಚಳವಳಿನಡೆಸಲು ನಮ್ಮ ಪಕ್ಷವು ಕರೆ ಕೊಡುತ್ತದೆ

# ಹೆಂಚಿನ ಮಜೂರರ ಚಾರಿತ್ರಿಕ ಹೋರಾಟ

54 ದಿನಗಳ ಚಾರಿತ್ರಿಕ ಮುಷ್ಕರದ ನಂತರ ಫೆಬ್ರವರಿ 2ರಂದು ಸೌತ್ ಕೆನರಾ ಟೈಲ್ ವರ್ಕರ್ಸ್ ಯೂನಿಯನ್ ಮತ್ತು ವೆಸ್ಟರ್ನ್ ಇಂಡಿಯಾ ಟೈಲ್ ಮ್ಯಾನುಫ್ಯಾಕ್ಚರರ್ಸ್ ಅಸೋಸಿಯೇಷನ್‌ಗಳ ನಡುವೆ ಈ ಕೆಳಗಿನ ಶರತ್ತುಗಳುಳ್ಳ ಒಪ್ಪಂದವಾಯ್ತು ಸೌತ್ ಕೆನರಾ ಟೈಲ್ ವರ್ಕರ್ಸ್ ಯೂನಿಯನ್‌ಗೆ ಶೇ. 80 ಕಾರ್ಮಿಕರು ಸೇರಿದ್ದು, ಅವರ ಸರ್ವಸದಸ್ಯರ ಸಭೆಯು ಫೆಬ್ರವರಿ 2 ರಂದು ನಡೆದು ಈ ಒಪ್ಪಂದವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

1 ಒಪ್ಪಂದವು ತಾ-1-10-83 ರಿಂದ 31-1-87 ರವರೆಗೆ (3ವರ್ಷ 4ತಿಂಗಳಕಾಲ) ಜಾರಿಯಲ್ಲಿರುತ್ತದೆ

2 ಒಪ್ಪಂದವು ತಾ-2-2-84ಕ್ಕೆ ಸಹಿಯಾದರೂ ಕೂಲಿ ಮತ್ತು ತುಟ್ಟಿ ಭತ್ಯೆ ಹೆಚ್ಚಳವು ತಾ-1-10-83 ರಿಂದಲೇ ಸಿಗುವುದು

3 ಮೊದಲನೆ ವರ್ಷ ಮೂಲ ಕೂಲಿಯಲ್ಲಿ 6 ಪೈಸೆ ಮತ್ತು 150 ಪಾಯಿಂಟಿಗೆ ತುಟ್ಟಿ ಭತ್ಯೆ, ಅಂದರೆ ಸರಾಸರಿ ಮೂಲ ಕೂಲಿ 10 ಪೈಸೆ ಇದ್ದರೆ ಅವನಿಗೆ ಒಂದು "ಟೌನ್ಸ್"ಗೆ ರೂ 2-22 ಸಿಗುತ್ತದೆ

4 ಎರಡನೇ ವರ್ಷಕ್ಕೆ ಪುನಃ 75 ಪಾಯಿಂಟಿಗೆ ತುಟ್ಟಿ ಭತ್ಯೆ ದೊರೆಯುವುದು

5. ಮೂರನೇ ವರ್ಷಕ್ಕೆ ಪುನಃ 75 ಪಾಯಿಂಟಿಗೆ ತುಟ್ಟಿ ಭತ್ಯೆ ದೊರೆಯುವುದು

6. ಎರಡನೇ ವರ್ಷದ ಹೆಚ್ಚಳವು ತಾ-1-10-84 ರಿಂದಲೂ ಮೂರನೇ ವರ್ಷದ ಹೆಚ್ಚಳವು ತಾ-1-10-85 ರಿಂದಲೂ ದೊರೆಯುವುದು

ಇದಲ್ಲದೆ, ಪ್ರತಿ ವರ್ಷ ಪೂರ್ಣ ಸಂಪಾದನೆಯ ಆಧಾರದ ಮೇಲೆ ಶೇ. 12 1/2 ಬೋನಸ್ಸು ದೊರೆಯುವುದು

1946 ರಿಂದ ಈ ತನಕ ಒಪ್ಪಂದಗಳಲ್ಲಿದ್ದ ಮಳೆಗಾಲದ ನಾಲ್ಕು ತಿಂಗಳುಗಳಲ್ಲಿ ಜೂನ್, ಜುಲೈ, ಆಗಸ್ಟ ಮತ್ತು ಸೆಪ್ಟೆಂಬರ್‌ಗಳಲ್ಲಿ ಕೆಲಸವಿಲ್ಲದ ದಿನಗಳಿಗೆ ಲೇ-ಆಫ್, ಕೂಲಿ ಕೇಳುವುದಿಲ್ಲ ಎಂಬ ಶರತ್ತು ಈ ಸಲದ ಒಪ್ಪಂದದಲ್ಲಿ ಕೈ ಬಿಡಲಾಗಿದೆ. ಅಂದರೆ ಈ ನಾಲ್ಕು ತಿಂಗಳುಗಳಲ್ಲಿ ಲೇ-ಆಫ್ ಕೇಳುವ ಕಾರ್ಮಿಕರ ಹಕ್ಕು ಊರ್ಜಿತವಾಗಿದೆ. ದೀರ್ಘ ಕಾಲದ ಈ ಬೇಡಿಕೆ ಈ ಒಪ್ಪಂದದ ದೆಸೆಯಿಂದ ಕಾರ್ಮಿಕರಿಗೆ ಸಿಗುವಂತಾಗಿದೆ.

ಇಷ್ಟು ಮಾತ್ರವಲ್ಲ ಘನ ರಾಜ್ಯ ಸರಕಾರವು ತನ್ನ ಕಾರ್ಮಿಕ ಮಂತ್ರಿಗಳ ಮೂಲಕ ಹಂಚಿನ ಕೆಲಸಗಾರರಿಗೆ ಬೆಲೆ

(7ನೇ ಪುಟ ನೋಡಿ)

# ಹೊತ್ತಿ ಉರಿಯುತ್ತಿರುವ ಹತ್ತಿ ಬೆಳೆಗಾರರ ಸಮಸ್ಯೆಗಳು

—ಜಿ. ಎನ್. ನಾಗರಾಜ್

ಲಾಭದಾಯಕ ಬೆಲೆಯ ಪ್ರಶ್ನೆ ಇಡೀ ಕೃಷಿಕ್ಷೇತ್ರಕ್ಕೆ ಅನ್ವಯಿಸಿದರೂ, ಕೈಗಾರಿಕೆಗಳೊಡನೆ ನಿಕಟ ಸಂಪರ್ಕ ಹೊಂದಿರುವ ವಾಣಿಜ್ಯ ಬೆಳೆಗಳಿಗೆ ತೀವ್ರವಾಗಿ ಅನ್ವಯಿಸುತ್ತದೆ. ಹೀಗಾಗಿ ಲಾಭದಾಯಕ ಬೆಲೆಯ ಕೂಗು ಕೇಳಿಬರುತ್ತಿರುವುದು ವಾಣಿಜ್ಯ ಬೆಳೆಗಾರರಿಂದ. ವಾಣಿಜ್ಯ ಬೆಳೆಗಳಲ್ಲಿ ಮುಖ್ಯವಾಗಿ ಹತ್ತಿ ವಿಶೇಷಸ್ಥಾನ ಪಡೆದಿದೆ. ಇಂದು ನಮ್ಮ ದೇಶದಲ್ಲಿ ಅತ್ಯಂತ ಬಿಕ್ಕಟ್ಟಿಗೆ ಒಳಗಾಗಿರುವ ಉದ್ಯಮ, ಹತ್ತಿ ಆಧಾರಿತ ಬಟ್ಟೆ ಗಿರಣಿಗಳು. ಈ ಬಿಕ್ಕಟ್ಟನ್ನು ಕೈಗಾರಿಕೋದ್ಯಮಿಗಳುಹತ್ತಿ ಬೆಳೆಗಾರರ ಮತ್ತು ಗಿರಣಿ ಕಾರ್ಮಿಕರ ತಲೆಯ ಮೇಲೆ ಹೊರಿಸಲು ಸರ್ವ ಪ್ರಯತ್ನ ಮಾಡುತ್ತಿದ್ದಾರೆ. ಈ ಪ್ರಯತ್ನದ ಫಲವಾಗಿ ಹತ್ತಿಗಿರಣಿ ಕಾರ್ಮಿಕರು ನಮ್ಮ ದೇಶದ ಚರಿತ್ರೆಯಲ್ಲಿಯೇ ಅತ್ಯಂತ ದೀರ್ಘ ಕಾಲದ ಮುಷ್ಕರವನ್ನು ಮಾಡಿರುವುದು ಎಲ್ಲರಿಗೂ ತಿಳಿದ ವಿಷಯ. ಇದೇ ರೀತಿ ಹತ್ತಿ ಬೆಳೆಯುವ ರೈತರು ಬೆಳೆದ ಹತ್ತಿಗೆ ಲಾಭದಾಯಕ ಬೆಲೆ ಸಿಕ್ಕಿಲ್ಲವೆಂದು ಪ್ರತಿಭಟಿಸುತ್ತಿದ್ದಾರೆ.

## ಭಾರತದ ಆರ್ಥಿಕದಲ್ಲಿ ಹತ್ತಿ

ವಿಶ್ವದಲ್ಲಿ ಕೈಗಾರಿಕಾ ಕ್ರಾಂತಿಗೆ ಚಾಲನೆ ನೀಡಿದ ಹತ್ತಿ ಭಾರತದಲ್ಲಿಯೂ ಕೈಗಾರಿಕಾ ಬೆಳವಣಿಗೆಗೆ ಮುಖ್ಯ ಕಾರಣವಾಗಿದೆ. ಅಂದಿನಿಂದ ಇಂದಿನ ವರೆವಿಗೆ ಭಾರತದ ಔದ್ಯಮೀಕರಣದಲ್ಲಿ ಹತ್ತಿ ತನ್ನ ಪ್ರಮುಖ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸುತ್ತಾ ಬಂದಿದೆ. ಬ್ರಿಟಿಷ್ ಆಳರಸರ ವಸಾಹತುಶಾಹೀ ಶೋಷಣೆಯ ಸಾಧನವಾಗಿ ಹತ್ತಿ ಅಗ್ಗದ ದರದಲ್ಲಿ ಬ್ರಿಟನ್‌ಗೆ ಸಾಗಿಸಲಾಗುತ್ತಿತ್ತು. ಹತ್ತಿಯನ್ನು ಸಾಗಿಸಲೆಂದೇ ರೈಲು ಮಾರ್ಗಗಳನ್ನು ಮತ್ತು ಹತ್ತಿಯನ್ನು ಸಂಸ್ಕರಿಸಲು ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಉದ್ಯಮಗಳು ಬೆಳೆದು ಬಂದವು. ಹೀಗೆ ಹತ್ತಿ ಬೆಳೆಯುವ ಪ್ರದೇಶಗಳಲ್ಲಿ ಕೈಗಾರಿಕೆಗಳು ಕಾಲಿಟ್ಟವು. ಹತ್ತಿಯ ತಳಿಗಳ ಅಭಿವೃದ್ಧಿಗೂ ಪ್ರೋತ್ಸಾಹ ನೀಡಿದವರು ಬ್ರಿಟಿಷರು.

ವಿಶ್ವದ ಹತ್ತಿ ಉತ್ಪಾದಿಸುವ ರಾಷ್ಟ್ರಗಳಲ್ಲಿ ಸೋವಿಯತ್ ದೇಶ ಅತಿ ಕಡಿಮೆ ಪ್ರದೇಶದಲ್ಲಿ ಅತಿ ಹೆಚ್ಚು ಉತ್ಪಾದನೆ ಮಾಡಿದರೆ, ಅತಿ ಹೆಚ್ಚು ಪ್ರದೇಶದಲ್ಲಿ ಹತ್ತಿ ಉತ್ಪಾದನೆ ಮಾಡುವುದರಲ್ಲಿ ನಮ್ಮ ದೇಶ ಮೊದಲನೆಯದು. ಉತ್ಪತ್ತಿಯಲ್ಲಿ ನಮ್ಮ ದೇಶ ನಾಲ್ಕನೆಯದು. ಸೋವಿಯತ್ ದೇಶ ಮೊದಲ ಸ್ಥಾನ ಪಡೆದಿದೆ. ಅಮೇರಿಕಾ ಸಂಯುಕ್ತ ಸಂಸ್ಥಾನ ಎರಡನೆಯದು, ಚೀನಾ ಮೂರನೇ ಸ್ಥಾನ ಪಡೆದಿದೆ. ಪ್ರತಿ ಎಕರೆ ಉತ್ಪಾದನೆ ತೆಗೆದುಕೊಂಡಲ್ಲಿ ಭಾರತ ಕಡೆಯದು.

ಬ್ರಿಟನ್‌ನಲ್ಲಿ ಹತ್ತಿಯ ಸಿದ್ಧವಸ್ತುಗಳು ಭಾರತಕ್ಕೆ ಬಂದು ಭಾರತದ ನೇಕಾರಿಕೆ ಉದ್ಯಮವನ್ನು ಬಲಿ ತೆಗೆದುಕೊಂಡವು. ಒಂದು ಕಡೆ ಹತ್ತಿಗೆ ಕೊಡುತ್ತಿದ್ದ ಕಡಿಮೆ ಬೆಲೆಯಿಂದ ಶೋಷಿತನಾಗುತ್ತಿದ್ದ ರೈತ, ಉದ್ಯೋಗ ಕಳೆದುಕೊಂಡ ನೇಕಾರ ಹತ್ತಿ ಗಿರಣಿಗಳಲ್ಲಿ ಕೂಲಿಗಾಗಿ ಸೇರಿದ ಕಾರ್ಮಿಕ ಇವರೆಲ್ಲರೂ ತೀವ್ರ ಶೋಷಣೆಗೆ ಒಳಗಾಗಿದ್ದಾರೆ.

ಪರದೇಶಿ ವಸ್ತ್ರವನ್ನು ಬಹಿಷ್ಕರಿಸಿ, "ಖಾದಿ ಧರಿಸಿ" ಎಂಬ ಘೋಷಣೆಗಳಿಂದ ಪ್ರಭಾವಿತರಾದ ರೈತ, ನೇಕಾರ ಕಾರ್ಮಿಕರು, ಸಂಘಟಿತ ಹೋರಾಟ ಮಾಡಿ ಸ್ವಾತಂತ್ರ್ಯ ಪಡೆಯುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಇಂದು ಅದೇ ಐಕ್ಯತೆಯಿಂದ ಹತ್ತಿ ಗಿರಣಿ ಮಾಲೀಕರು ಮತ್ತು ಅವರ ನಿಯಂತ್ರಣಕ್ಕೆ ಒಳಗಾದ ಸರಕಾರದ ಆರ್ಥಿಕ ನೀತಿಗಳಿಂದ ಹಾನಿಗೊಳಗಾದ ಹತ್ತಿ ಬೆಳೆಯುವ ರೈತರು ಮತ್ತು ಹತ್ತಿ ಗಿರಣಿಗಳಲ್ಲಿ ದುಡಿಯುವ ಕಾರ್ಮಿಕರು ಹೋರಾಡಬೇಕಾಗಿದೆ

ಭಾರತದಲ್ಲಿ ಇಂದು 400 ನೂಲಿನ ಗಿರಣಿಗಳಲ್ಲಿ, 291 ಜವಳಿ ಗಿರಣಿಗಳಲ್ಲಿ 8 ಲಕ್ಷ 76 ಸಾವಿರ ಕಾರ್ಮಿಕರು ದುಡಿಯುತ್ತಿದ್ದಾರೆ. ಇದಲ್ಲದೆ ಸಾವಿರಾರು ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಮಿಲ್ಲುಗಳು ಹತ್ತಿಯ ಮೇಲೆ ಆಧಾರಿತವಾಗಿವೆ. ನಮ್ಮ ದೇಶದ ಆರ್ಥಿಕರಚನೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ

ಕರ್ನಾಟಕ ರಾಜ್ಯ ಭಾರತದ ಹತ್ತಿ ನಕ್ಷೆಯಲ್ಲಿ ಪ್ರಮುಖ ಸ್ಥಾನದಲ್ಲಿದೆ ಎಂಬುದನ್ನು ಕೆಳಗಿನ ಮಾಹಿತಿಯಿಂದ ಗ್ರಹಿಸಬಹುದು

| ರಾಜ್ಯ | ಉತ್ಪಾದನೆ (ಸಾವಿರಬೇಲುಗಳು) | ವಿಸ್ತೀರ್ಣ (ಸಾವಿರ ಹೆಕ್ಟೇರುಗಳು) | ನೀರಾವರಿ ಹತ್ತಿಯ ಶೇಕಡಾ ಭಾಗ |
|---|---|---|---|
| 1) ಗುಜರಾತ್ | 2101 | 1754 | 22 |
| 2) ಪಂಜಾಬ್ | 1325 | 633 | 98 |
| 3) ಮಹಾರಾಷ್ಟ್ರ | 1317 | 2509 | 3 |
| 4) ಕರ್ನಾಟಕ | 823 | 1046 | 9 |
| 5) ಹರ್ಯಾಣ | 603 | 286 | 99 |
| 6) ರಾಜಸ್ತಾನ | 570 | 402 | 85 |
| 7) ತಮಿಳುನಾಡು | 496 | 328 | 48 |
| 8) ಆಂಧ್ರ ಪ್ರದೇಶ | 347 | 383 | 38 |

ಹತ್ತಿ ಉತ್ಪಾದನೆಯಲ್ಲಿ ನಮ್ಮ ರಾಷ್ಟ್ರದಲ್ಲಿ ಕರ್ನಾಟಕ ನಾಲ್ಕನೆಯದಾಗಿದ್ದರೆ ವಿಸ್ತೀರ್ಣದಲ್ಲಿ ಮೂರನೆಯದು ಒಟ್ಟು ದೇಶದ ಹತ್ತಿ ಉತ್ಪಾದನೆಯಲ್ಲಿ ಹತ್ತರಲ್ಲಿ ಒಂದು ಭಾಗ ಕರ್ನಾಟಕಕ್ಕೆ ಸಲ್ಲುತ್ತದೆ ನೀರಾವರಿ ಹತ್ತಿಯ ವಿಸ್ತೀರ್ಣ ಪಂಜಾಬ್, ಹರ್ಯಾಣ, ರಾಜಸ್ಥಾನ, ತಮಿಳುನಾಡು ಆಂಧ್ರ ಪ್ರದೇಶದಲ್ಲಿ ಹೆಚ್ಚಾಗಿರುವುದನ್ನು ನಾವು ಕಾಣುತ್ತೇವೆ.

ಕರ್ನಾಟಕದಲ್ಲಿ ಕೇವಲ 9 ಭಾಗ ನೀರಾವರಿ ಹತ್ತಿಯ ವಿಸ್ತೀರ್ಣ. ಉಳಿದದ್ದೆಲ್ಲಾ ಒಣ ಬೇಸಾಯದ ಹತ್ತಿ.

ಕರ್ನಾಟಕದಲ್ಲಿ ಒಟ್ಟು ಹದಿನಾಲ್ಕು ಜಿಲ್ಲೆಗಳಲ್ಲಿ ಹತ್ತಿಯನ್ನು ಬೆಳೆದರೂ ಪ್ರಮುಖವಾದ ಜಿಲ್ಲೆಗಳು ಕೇವಲ ಆರು ಅದರಲ್ಲಿ ರಾಯಚೂರು ಜಿಲ್ಲೆಯೇ ಪ್ರಥಮ ಸ್ಥಾನ ಉಳಿದ ಜಿಲ್ಲೆಗಳಲ್ಲಿ ಧಾರವಾಡ, ಬಿಜಾಪುರ, ಬಳ್ಳಾರಿ, ಗುಲ್ಬರ್ಗಾ, ಚಿತ್ರದುರ್ಗ, ಪ್ರಮುಖವಾದುವು. ವಿಸ್ತೀರ್ಣ, ಉತ್ಪಾದನೆ, ಮಾರುಕಟ್ಟೆ ಇವೆಲ್ಲವುಗಳ ದೃಷ್ಟಿಯಿಂದಲೂ ರಾಯಚೂರು ಬಹಳ ಪ್ರಮುಖವಾದುದು. ಹೀಗೆ ರಾಯಚೂರು ಕರ್ನಾಟಕ ರಾಜ್ಯದ ಹತ್ತಿ ಬೆಳೆಗಾರರ ಸಮಾವೇಶದ ಕೇಂದ್ರವಾಗಿದ್ದು ಎಲ್ಲಾ ದೃಷ್ಟಿಯಿಂದಲೂ ಸೂಕ್ತವಾಗಿದೆ.

ಕರ್ನಾಟಕ ರಾಷ್ಟ್ರದ ಹತ್ತಿ ಉತ್ಪಾದನೆಯಲ್ಲಿ ಪ್ರಮುಖ ಸ್ಥಾನದಲ್ಲಿದ್ದರೂ ಹತ್ತಿ ಗಿರಣಿಗಳ ಸ್ಥಾಪನೆಯಲ್ಲಿ ಹಿಂದುಳಿದಿದೆ. ದೇಶದ ಹತ್ತಿ ಉತ್ಪಾದನೆಯ ಹತ್ತರಲ್ಲಿ ಒಂದು ಭಾಗ ಕರ್ನಾಟಕದ ಕಾಣಿಕೆಯಾದರೂ ಹತ್ತಿ ನೂಲಿನ ಗಿರಣಿಗಳಲ್ಲಿ ಕೇವಲ ಇಪ್ಪತ್ತರಲ್ಲಿ ಒಂದು ಭಾಗ ಮತ್ತು ಜವಳಿ ಗಿರಣಿಗಳಲ್ಲಿ ನೂರರಲ್ಲಿ ಮೂರು ಭಾಗ ಮಾತ್ರ ಕರ್ನಾಟಕದಲ್ಲಿವೆ. ಕರ್ನಾಟಕದ ಉದ್ದಿಮೆ ಬೆಳವಣಿಗೆಯಲ್ಲಿ ಹತ್ತಿ ಇನ್ನೂ ಹೆಚ್ಚಿನ ಮಹತ್ವದ ಪಾತ್ರ ವಹಿಸಬಹುದಾಗಿದೆ.

## ಹತ್ತಿ ಬೆಳೆಗಾರರ ಸಮಸ್ಯೆಗಳು

ಹತ್ತಿ ಬೆಳೆಗಾರರ ಸಮಸ್ಯೆಗಳು ಬಹು ಮುಖವಾದುವು ಈ ಸಮಸ್ಯೆಗಳ ವೈಜ್ಞಾನಿಕ ವಿಶ್ಲೇಷಣೆ ಸಮಸ್ಯೆಯ ಮೂಲವನ್ನು ಗುರುತಿಸುವುದಕ್ಕೆ ಮತ್ತು ಅದಕ್ಕೆ ತಕ್ಕಂತೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ಸಹಾಯ ಮಾಡುತ್ತದೆ

ಹತ್ತಿಯನ್ನು ಬೆಳೆಯುವ ಪರಿಸ್ಥಿತಿಗಳಲ್ಲಿ ಎರಡು ವಿಧ. ಒಣ ಬೇಸಾಯ ಮತ್ತು ನೀರಾವರಿ ಬೇಸಾಯ ಸಮಸ್ಯೆಗಳು, ಅನೇಕವು ಎರಡು ಪರಿಸ್ಥಿತಿಗಳಲ್ಲಿ ಸಮಾನವಾಗಿದ್ದರೂ ಕೆಲವು ಭಿನ್ನವಾದವು ಹತ್ತಿಯ ರೈತನ ಸಮಸ್ಯೆಗಳು ನೀರಾವರಿ ರೈತನನ್ನು ತೀವ್ರವಾಗಿ ತಟ್ಟಿವೆ. ಆದುದರಿಂದ ನೀರಾವರಿ ಹತ್ತಿಯ ರೈತ ಎಚ್ಚರಗೊಂಡಿದ್ದಾನೆ, ತನ್ನ ಬೇಡಿಕೆಗಳಿಗೆ ಧ್ವನಿಯೆತ್ತಿದ್ದಾನೆ.

ಹತ್ತಿಯ ಬೆಳೆಗಾರ ತನ್ನ ಹಿಡುವಳಿಯಲ್ಲಿ ಹತ್ತಿಯನ್ನು ಎಷ್ಟು ಪ್ರದೇಶದಲ್ಲಿ ಬಿತ್ತಬೇಕೆಂದು ತೀರ್ಮಾನ ಮಾಡಿದ ತಕ್ಷಣದಿಂದ ಅವನನ್ನು ಸಮಸ್ಯೆಗಳ ಸರಮಾಲೆಯೇ ಎದುರುಗೊಳ್ಳುತ್ತದೆ.

1) ಹತ್ತಿಯನ್ನು ಬಿತ್ತಲು ಕ್ರಿಮಿನಾಶಕ ಸಿಂಪರಣೆಯ ಯಂತ್ರ ಮೊದಲಾದ ಪರಿಕರಗಳು, ಅವುಗಳ ಗುಣಮಟ್ಟ, ಅವುಗಳನ್ನು ಕೊಳ್ಳಲು ಬೇಕಾದ ಹಣ ಇವು ಅವನು ಎದುರಿಸಬೇಕಾದ ಮೊದಲ ಸಮಸ್ಯೆಗಳು

2) ಅವನ್ನು ಹತ್ತಿ ಬೆಳೆಯುವ ಪರಿಸ್ಥಿತಿಗಳನುಗುಣವಾಗಿ ಮಳೆಯ ಅನಿಶ್ಚಿತ ಮಳೆ ಆಶ್ರಿತ ಪ್ರದೇಶದ ಪೂರ್ಣ ನಿರ್ಲಕ್ಷ್ಯ ಮಳೆಯ ಪ್ರಮಾಣಕ್ಕೆ ತಕ್ಕತಂಹ ತಳಿ ನೀರಾವರಿಯ ರೈತನಾದರೆ ನೀರಾವರಿಯ ಪದ್ಧತಿಯ ಭಾಗವಾದ ನೀರು ದೊರೆಯುವ ಪ್ರಮಾಣ ಮತ್ತು ಸಮಯದಲ್ಲಿ ಅನಿಶ್ಚಿತತೆ. ಕಾಲುವೆಗಳ ಅವ್ಯವಸ್ಥೆ, ಭ್ರಷ್ಟಾಚಾರ ಈ ಸಮಸ್ಯೆಗಳಲ್ಲಿ ಎರಡನೆಯ ಹಂತ.

3) ಹತ್ತಿಯನ್ನು ಬೆಳೆದ ತಕ್ಷಣ ಅವನನ್ನು ಎದುರಿಸುವ ಸಮಸ್ಯೆಗಳು ಸಾಲದ ಮತ್ತು ಸರಕಾರಿ ಬಾಕಿ ವಸೂಲಿಗಾರರ ಒತ್ತಡ, ಮಾರು ಕಟ್ಟೆಗೆ ಸಾಗಣೆಗೆ ರಸ್ತೆ ಮತ್ತು ವಾಹನದ ಸಮಸ್ಯೆಗಳು ಮಾರುಕಟ್ಟೆಗೆ ಬರುವವರೆಗಿನ ಸಮಸ್ಯೆಗಳು.

4) ಮಾರುಕಟ್ಟೆಗೆ ಬಂದ ಮೇಲೆ ಬೆಲೆ, ದಲಾಲಿಯ ಹಿಂದೆ ನಿಂತ ಬೆಲೆಯನ್ನು ನಿಯಂತ್ರಿಸುವ ಅಗೋಚರ ಶಕ್ತಿಗಳು ಇವುಗಳದೇ ಮುಖ್ಯ ಹೊಡೆತ.

5) ಮಾರುಕಟ್ಟೆಯಲ್ಲಿ ಕಾಯದೇಶೀರ, ಬೇಕಾಯದೇಶೀರ ರೀವಾಜಿನಿಂದ ವಸೂಲಿ ಮಾಡುವ ಹತ್ತು ಹಲವು ಸುಂಕಗಳು ಬೆಳಗಾರರನ್ನು ಗುರಿಪಡಿಸುವ ಅನೇಕ ಹಿಂಸೆಗಳು ಈ ಎಲ್ಲಾ ಸಮಸ್ಯೆಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸಲು ಮತ್ತು ಹೋರಾಟದ ಕಾರ್ಯಕ್ರಮವನ್ನು ರೂಪಿಸಲು ರಾಯಚೂರಿನಲ್ಲಿ ಫೆ 15 ಮತ್ತು 16 ರಂದು ಒಂದು ಸಮಾವೇಶ ನಡೆಯಿತು.

## ಸದಸ್ಯತ್ವ ತಪಾಸಣೆಯ ಫಲಿತಾಂಶಕ್ಕೆ ಪ್ರತಿಭಟನೆ

28 ಜನವರಿ 84 ರಂದು ನಾಲ್ಕು ಕೇಂದ್ರ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಕೇಂದ್ರ ಕಾರ್ಮಿಕ ಸಚಿವರನ್ನು ಬೇಟಿ ಮಾಡಿ ಸದಸ್ಯತ್ವ ತಪಾಸಣೆಯ ಫಲಿತಾಂಶ ಪ್ರಕಟಣೆಯನ್ನು ಪ್ರತಿಭಟಿಸಿದ್ದಾರೆ. ಕೇಂದ್ರ ಕಾರ್ಮಿಕ ಸಂಘಗಳ ಬಲವನ್ನು ತಿಳಿಯಲು ನಡೆಸಿರುವ ತಪಾಸಣೆಯು ಏಕ ಪಕ್ಷೀಯ ಹಾಗೂ ಪ್ರಜಾಸತ್ತಾತ್ಮಕವಲ್ಲದ ರೀತಿಯಲ್ಲಿ ನಡೆದು ನಮ್ಮ ಈ ಹಿಂದಿನ ಸಂದೇಹವನ್ನು ದೃಢಪಡಿಸಿವೆ ಎಂದು ತಿಳಿಸಿದ್ದಾರೆ. ನಿಯೋಗದಲ್ಲಿದ್ದವರೆಂದರೆ, ಕಾ. ಇಂದ್ರಜಿತ್ ಗುಪ್ತ, ಟಿ. ಎನ್. ಸಿದ್ಧಾಂತ, ವೈ.ಡಿ. ಶರ್ಮ (ಎ. ಐ. ಟಿ ಯು. ಸಿ) ಎಂ. ಕೆ. ಪಂಧೆ (ಸಿಐಟಿಯು), ಅನಿಲ್‌ದಾಸ್ ಚೌದುರಿ, ಪ್ರತುಲ್ ಚೌದುರಿ (ಯು. ಟಿ. ಯು ಸಿ.) ಮತ್ತು ಅಮರ್ ಪ್ರಸಾದ್ ಚಕ್ರವರ್ತಿ (ಟಿ. ಯು ಸಿ. ಸಿ.)

ತಪಾಸಣೆಯನ್ನು ನಡೆಸಿರುವ ಕ್ರಮ ಹಾಗೂ ಕೇಂದ್ರ ಕಾರ್ಮಿಕ ಸಂಘಗಳ ಸದಸ್ಯತ್ವದ ಸಂಖ್ಯೆಯನ್ನು ತೋಚಿದಂತೆ ಕಡಿಮೆ ಮಾಡಿರುವುದನ್ನು ಕುರಿತಂತೆ ನಿಯೋಗವು ಪ್ರತಿಭಟನೆ ಸಲ್ಲಿಸಿದೆ ಸಿ. ಐ ಟಿ ಯು ಮತ್ತು ಎ. ಐ ಟಿ. ಯು. ಸಿ. ಗಳು ಸದಸ್ಯತ್ವ ತಪಾಸಣೆಗೆ ಒಪ್ಪಿಗೆ ನೀಡಿರಲಿಲ್ಲ. ಸರ್ಕಾರವು ಏಕ ಪಕ್ಷೀಯವಾಗಿ ಸದಸ್ಯತ್ವ ಬಲವನ್ನು ನಿರ್ಧರಿಸಿವೆ. ಯು. ಟಿ. ಯು. ಸಿ. ಮತ್ತು ಟಿಯುಸಿಸಿ ಈ ಮೊದಲು ಒಪ್ಪಿಗೆ ನೀಡಿದ್ದರೂ ನಿರ್ಧಾರಿತ ರೀತಿಯಲ್ಲಿ ತಪಾಸಣೆ ನಡೆಯಲಿಲ್ಲವಾದುದರಿಂದ ನಂತರ ಬಹಿಷ್ಕರಿಸಿದವು.

ಚೀಫ್ ಲೇಬರ್ ಕಮೀಷನರ್‌ರವರು ಸಭೆ ಕರೆದಿರುವುದು ಏಕ ಪಕ್ಷೀಯವಾಗಿ ಮಾಡಿರುವ ತಪಾಸಣೆಗೆ ಒಪ್ಪಿಗೆ ಮುದ್ರೆಯನ್ನು ಪಡೆಯಲು ಮಾತ್ರ

(ಕೊನೇ ಪುಟ ನೋಡಿ)

**ಪಶ್ಚಿಮ ಬಂಗಾಳ**

# ಉಕ್ಕಿ ಹರಿದ ಉತ್ಸಾಹದ ಎಸ್. ಎಫ್. ಐ.ನ ೫ನೇ ರಾಷ್ಟ್ರ ಸಮ್ಮೇಳನ

—ಸಂಕ್ಷಿಪ್ತ ವರದಿ

1984 ಜನವರಿ 22 ರಿಂದ 26ರ ವರೆಗೆ ಪಶ್ಚಿಮ ಬಂಗಾಳ ರಾಜ್ಯದ "ಡಂಡಂ" ನಲ್ಲಿ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್ ಎಫ್.ಐ)ನ 5 ನೇ ರಾಷ್ಟ್ರ ಸಮ್ಮೇಳನವು ಅತ್ಯಂತ ಯಶಸ್ವಿಯಾಗಿ ನಡೆಯಿತು. ರಾಷ್ಟ್ರದ ಬಹುತೇಕ ರಾಜ್ಯಗಳಿಂದ ಸಾವಿರ ಸದಸ್ಯತ್ವಕ್ಕೆ ಓರ್ವ ಪ್ರತಿನಿಧಿಯಂತೆ ವೀಕ್ಷಕರೂ ಸೇರಿ 1400 ಜನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕರ್ನಾಟಕ ರಾಜ್ಯದಿಂದ 24 ಜನ ವಿದ್ಯಾರ್ಥಿಗಳು (16 ಪ್ರತಿನಿಧಿಗಳು ಮತ್ತು 8 ವೀಕ್ಷಕರು) ಸಮ್ಮೇಳನದಲ್ಲಿ ಭಾಗವಹಿಸಿದ್ದರು.

## ಮೆರವಣಿಗೆ, ಸಭೆ

ಸಮ್ಮೇಳನದ ಮೊದಲ ದಿನ 22-1-1984 ರಂದು ಸುಮಾರು 2 ಲಕ್ಷ ವಿದ್ಯಾರ್ಥಿಗಳ ಬೃಹತ್ ಮೆರವಣಿಗೆ ಮತ್ತು ಸಾರ್ವಜನಿಕ ಸಭೆಯು ನಡೆಯಿತು. ಕಾಂ ಎಂ. ಎ. ಬೇಬಿ ಅಧ್ಯಕ್ಷತೆ ವಹಿಸಿದ್ದ ಈ ಸಭೆಯಲ್ಲಿ ಸ್ವಾಗತ ಸಮಿತಿ ಅಧ್ಯಕ್ಷ ಹಾಗೂ ಪ. ಬಂಗಾಳ ರಾಜ್ಯದ ಮುಖ್ಯಮಂತ್ರಿ ಕಾ, ಜ್ಯೋತಿಬಸು, ನೇಪಾಳ್ ದೇವ್‌ಭಟ್ಟಾಚಾರ್ಯ ಮತ್ತಿತರ ಹಲವಾರು ಪ್ರಮುಖರು ಮಾತನಾಡಿದರು. ಸಭೆ ಮೆರವಣಿಗೆ ಆಕರ್ಷಣೀಯವಾಗಿದ್ದು ಸ್ಫೂರ್ತಿದಾಯಕವಾಗಿತ್ತು. 23-1-1984 ರಂದು ಸಮ್ಮೇಳನದ ಉದ್ಘಾಟನಾ ಸಮಾರಂಭ ನಡೆಯಿತು. ಕಲ್ಕತ್ತಾ ವಿಶ್ವವಿದ್ಯಾಲಯದ ಮಾನ್ಯ ಉಪಕುಲಪತಿ ಆರ್. ಕೆ. ಪೊದ್ದಾರ್‌ರವರು ಸಮ್ಮೇಳನವನ್ನು ಉದ್ಘಾಟಿಸಿದರು. ಸುಭಾಷ್‌ಚಂದ್ರಬೋಸ್ ನೇತೃತ್ವದ ಐ ಎನ್. ಎ. ನಾಯಕಿಯಾಗಿದ್ದ ಕಾಂ. ಲಕ್ಷ್ಮಿಸೈಗಲ್‌ರವರು ಮುಖ್ಯ ಅತಿಥಿಗಳಾಗಿದ್ದರು. ಪ ಬಂಗಾಳ ಸರಕಾರದ ಕ್ರೀಡಾ ಮಂತ್ರಿ ಸುಭಾಷ್ ಚಕ್ರವರ್ತಿಯವರು ಸಮ್ಮೇಳನಕ್ಕೆ ಸ್ವಾಗತ ಬಯಸಿದರು. ಉದ್ಘಾಟನಾ ಸಮಾರಂಭಕ್ಕಿಂತ ಮೊದಲು ಪುಟ್ಟ ಮಕ್ಕಳಿಂದ ಕ್ರಾಂತಿಗೀತೆಗಳ ವಾದ್ಯಗೋಷ್ಠಿ ಹುತಾತ್ಮ ಸ್ತಂಭಕ್ಕೆ ಗೌರವ ನೀಡಿತು. ಬೊಂಬಾಯಿಯಲ್ಲಿ ನಡೆದ 4ನೇ ಎಸ್ ಎಫ್ ಐ. ಸಮ್ಮೇಳನದಿಂದ "ಡಂಡಂ" ಸಮ್ಮೇಳನದ 25 ತಿಂಗಳ ಕಾಲಾವಧಿಯಲ್ಲಿ ಸಂಘಟನೆಯು ಪ್ರತಿಗಾಮಿ ಶಕ್ತಿಗಳ ಧಾಳಿಯಿಂದಾಗಿ ಅಮೂಲ್ಯವಾದ 25 ಸಂಗಾತಿಗಳನ್ನು ದುಃಖದಿಂದ ನೆನಪಿಸಿಕೊಂಡ ಪ್ರತಿಯೊಬ್ಬ ಪ್ರತಿನಿಧಿಯೂ ಹುತಾತ್ಮ ಸ್ತಂಭಕ್ಕೆ ಕೆಂಪು ಹೂ ಅರ್ಪಿಸಿ ಕೆಂಪು ವಂದನೆ ಸಲ್ಲಿಸಿದರು

## ವಿದೇಶಿ ಪ್ರತಿನಿಧಿಗಳು

ಅಫಘಾನಿಸ್ಥಾನ, ಕಾಂಪೂಚಿಯಾ, ಬಾಂಗ್ಲಾದೇಶ, ಇರಾನ್ ಆಫ್ರಿಕ (ಎ ಎನ್. ಸಿ.) ನಮಿಬಿಯಾ (ಸ್ವಾಪೋ), ನೇಪಾಳ ಸೇರಿದಂತೆ 13 ರಾಷ್ಟ್ರಗಳಿಂದ ಸೌಹಾರ್ದ ಪ್ರತಿನಿಧಿಗಳು ಇದೇ ಮೊದಲ ಬಾರಿಗೆ ಎಸ್. ಎಫ್. ಐ ಸಮ್ಮೇಳನದಲ್ಲಿ ಭಾಗವಹಿಸಿ ಶುಭ ಕೋರಿ, ಬೆಂಬಲಿಸಿ ಮಾತನಾಡಿದರು. ಎಸ್ ಎಫ್. ಐ. ಅಂತರಾಷ್ಟ್ರೀಯ ಮಾನ್ಯತೆ ಪಡೆದಿರುವುದನ್ನು ಸಮ್ಮೇಳನ ಸಾಭೀತುಪಡಿಸಿತು. ರಷ್ಯಾ ಮತ್ತು ಚೈನಾದಿಂದ ಸಮ್ಮೇಳನದಲ್ಲಿ ಭಾಗವಹಿಸಲು ಬರಬೇಕಾಗಿದ್ದ ಸಂಗಾತಿಗಳಿಗೆ ಭಾರತದ ಕೇಂದ್ರ ಸರಕಾರವು ದುರುದ್ದೇಶದಿಂದ ವೀಸಾ ನಿರಾಕರಿಸಿದ್ದನ್ನು ಸಮ್ಮೇಳನವು ತೀವ್ರವಾಗಿ ಖಂಡಿಸಿ, ನಿರ್ಣಯ ಅಂಗೀಕರಿಸಿತು. ಹಲವಾರು ದೇಶಗಳಿಂದ ಸಮ್ಮೇಳನಕ್ಕೆ ಶುಭ ಕೋರಿ ಪತ್ರಗಳು ಬಂದಿದ್ದವು

## ನಿರ್ಣಯ ವರದಿಗಳು

ಸಮ್ಮೇಳನದಲ್ಲಿ ಶ್ರದ್ಧಾಂಜಲಿ ನಿರ್ಣಯ, ರಾಷ್ಟ್ರೀಯ ಐಕ್ಯತೆ ಬಗ್ಗೆ ಕೇಂದ್ರ ರಾಜ್ಯ ಸಂಬಂಧಗಳ ಬಗ್ಗೆ, ಕೋಮುವಾದ-ಜಾತಿವಾದ ಪ್ರವೃತ್ತಿ ಭಾವನೆ ಕೆರಳಿಸುತ್ತಿರುವ ಶಕ್ತಿಗಳನ್ನು ಖಂಡಿಸಿ, ನಿರುದ್ಯೋಗ ಸಮಸ್ಯೆಗಳ ಬಗ್ಗೆ, ಶಿಕ್ಷಣ ನೀತಿಯ ಬಗ್ಗೆ ಅಂತರಾಷ್ಟ್ರೀಯ ಪರಿಸ್ಥಿತಿ ಬಗ್ಗೆ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಗ್ವಾಲಿಯರ್‌ನಲ್ಲಿ 1983 ಜುಲೈ 31 ಮತ್ತು ಆಗಸ್ಟ್ 1, 2 ರಂದು ನಡೆದ ಅಖಿಲ ಭಾರತ ಮಟ್ಟದ ವೈದ್ಯಕೀಯ ಶಿಕ್ಷಣ ಮತ್ತು ಆರೋಗ್ಯ ರಕ್ಷಣಾ ಸಮಾವೇಶದಲ್ಲಿ ಅಂಗೀಕರಿಸಲಾದ ನಿರ್ಣಯವನ್ನು ಎಲ್ಲಾ ಪ್ರತಿನಿಧಿಗಳಿಗೆ ಹೆಚ್ಚಿನ ಸಲಹೆ ಸೂಚನೆಗಳಿಗಾಗಿ ನೀಡಲಾಯಿತು. ಸಂಘಟನಾ ನಿರ್ಣಯಗಳನ್ನು ಚರ್ಚಿಸಿ ಅಂಗೀಕರಿಸಲಾಯಿತು. ಪ್ರಧಾನ ಕಾರ್ಯದರ್ಶಿ ಕಾಂ. ನೇಪಾಳ್ ದೇವ್‌ಭಟ್ಟಾಚಾರ್ಯರವರು ಕರಡು ವರದಿಯನ್ನು ಮಂಡಿಸಿದರು. ಪ್ರತಿನಿಧಿಗಳ ಚರ್ಚೆ ವಿಮರ್ಶೆಗಳ ನಂತರ ವರದಿ ಅಂಗೀಕರಿಸಲ್ಪಟ್ಟಿತ್ತು. ಕರ್ನಾಟಕದಿಂದ ಕಾಂ. ಎನ್ ರಾಜಣ್ಣ ಮತ್ತು ಕಾಂ. ಸಿ.ಎಸ್ ಮಂಜುಳಾರವರು ಕರಡು ವರದಿ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ್ದರು.

## ಸದಸ್ಯತ್ವ

5ನೇ ರಾಷ್ಟ್ರ ಸಮ್ಮೇಳನವು ಎಸ್. ಎಫ್. ಐ ಯ ದೊಡ್ಡ ಬೆಳವಣಿಗೆಯನ್ನು ದಾಖಲಿಸಿತು. ಕೇಂದ್ರ ಸಮಿತಿಯು ಕೋಟಾವನ್ನು ಮೀರಿಸಿ, 11,05,915 ಸದಸ್ಯತ್ವವನ್ನು ಎಸ್ ಎಫ್.ಐ. ರಾಷ್ಟ್ರದಾದ್ಯಂತ ನೋಂದಾಯಿಸಿ ದೇಶದ ಅತ್ಯಂತ ಬಲಿಷ್ಠ ಪ್ರಗತಿಪರ ವಿದ್ಯಾರ್ಥಿ ಸಂಘಟನೆಯಾಗಿ ಬೆಳೆದು ನಿಂತಿದೆ. ಪ್ರತಿದಿನ ಸರಾಸರಿ 518 ವಿದ್ಯಾರ್ಥಿಗಳು ಎಸ್.ಎಫ್ ಐ ಸದಸ್ಯರಾಗಿ ನೋಂದಾಯಿಸಲ್ಪಟ್ಟಿದ್ದಾರೆ. ಗೋವಾ, ಸಿಕ್ಕಿಂ, ಅಂಡಮಾನ್-ನಿಕೋಬಾರ್ ಮೊದಲಾದ ಹೊಸ ಪ್ರದೇಶಗಳಿಗೂ ಎಸ್ ಎಫ್.ಐ ಪ್ರವೇಶ ಮಾಡಿದೆ. ಕರ್ನಾಟಕ ರಾಜ್ಯದಲ್ಲೂ ಬೊಂಬಾಯಿ ಸಮ್ಮೇಳನದ ನಂತರ ಮೂರು ಪಾಲು ಸದಸ್ಯತ್ವ ಹೆಚ್ಚಳವಾಗಿರುವುದನ್ನು ರಾಷ್ಟ್ರ ಸಮ್ಮೇಳನವು ಗುರುತಿಸಿತು. ಪ್ರತಿನಿಧಿ ಅಧಿವೇಶನವನ್ನು ಉದ್ದೇಶಿಸಿ ಪ.ಬಂಗಾಳದ ಮುಖ್ಯಮಂತ್ರಿ ಕಾಂ ಜ್ಯೋತಿಬಸು ಮಾತನಾಡಿದರು. ಸಮ್ಮೇಳನದ ನೆನಪಿಗಾಗಿ ಹೊರತಂದ ಆಕರ್ಷಕ ಸ್ಮರಣಸಂಚಿಕೆಯನ್ನು ಕಾಂ. ಜ್ಯೋತಿಬಸು ಅವರು ಬಿಡುಗಡೆ ಮಾಡಿದರು. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪೊಲಿಟ್ ಬ್ಯೂರೋ ಸದಸ್ಯ ಕಾಂ. ಬಸವಪುನ್ನಯ್ಯ, ತ್ರಿಪುರಾ ರಾಜ್ಯದ ಮುಖ್ಯಮಂತ್ರಿ ಕಾಂ. ನೃಪೇನ್ ಚಕ್ರವರ್ತಿ, ಸ್ಥಾಪನಾ ಎಸ್. ಎಫ್ ಐ ಅಧ್ಯಕ್ಷರಾದ ಕಾಂ ವಿ ಭಾಸ್ಕರನ್ ಎಸ್ ಎಫ್ ಐ ಅಖಿಲ ಭಾರತ ಅಧ್ಯಕ್ಷರಾಗಿದ್ದ ಕಾಂ. ಪ್ರಕಾಶ್ ಕಾರತ್ ಮೊದಲಾದವರು ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದರು.

## ನೂತನ ಕೇಂದ್ರ ಸಮಿತಿಗೆ ಆಯ್ಕೆ

5ನೇ ರಾಷ್ಟ್ರ ಸಮ್ಮೇಳನವು 83 ಸದಸ್ಯರನ್ನೊಳಗೊಂಡ ನೂತನಕೇಂದ್ರ ಸಮಿತಿಯನ್ನು ಅವಿರೋಧವಾಗಿ ಆಯ್ಕೆ ಮಾಡಿತು. ಅಧ್ಯಕ್ಷರಾಗಿ ಕಾಂ. ಸೀತಾರಾಮಯಾಚುರಿ, ಉಪಾಧ್ಯಕ್ಷರುಗಳಾಗಿ ಕಾಂ ಸಿ. ಪಿ. ಜೋನ್, ವಿ ಕೃಷ್ಣಯ್ಯ, ಸಮಾರ್‌ಚಕ್ರವರ್ತಿ, ತಪೋಸ್‌ಬೋಸ್, ಅಶೋಕ್ ದಾವಲೆ ಪ್ರಧಾನಕಾರ್ಯದರ್ಶಿಯಾಗಿ ಕಾಂ. ನೇಪಾಳ್‌ದೇವ್‌ಭಟ್ಟಾಚಾರ್ಯ ಪುನಃ ಆಯ್ಕೆಗೊಂಡರು. ಸಹಕಾರ್ಯದರ್ಶಿಗಳಾಗಿ ಕಾಂ ಸುರೇಶ್‌ಕುರೂಪ್‌ಗೌತಂದೇವ್, ಅನಂತದೇಖಾ ಮತ್ತು ರಾಜೇಶ್‌ಶರ್ಮ ಆಯ್ಕೆಯಾದರು. ಕಛೇರಿ ಕಾರ್ಯದರ್ಶಿಯಾಗಿ ಕಾಂ ಆದಿತ್ಯ ನಿಗಂ, ಖಜಾಂಚಿಯಾಗಿ ಕಾಂ. ಗಾಯತ್ರಿಗಂಗೋಲಿ ಆಯ್ಕೆಯಾದರು. ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಕಾಂ. ಸೈಫುದ್ದೀನ್‌ಚೌದರಿ ಆಯ್ಕೆಯಾದರು.

ಕರ್ನಾಟಕ ರಾಜ್ಯದಿಂದ ಕಾಂ. ಆರ್. ಜಯಕುಮಾರ್, ಕಾಂ. ಎಸ್. ಆರ್ ಆರಾಧ್ಯ ಕೇಂದ್ರ ಸಮಿತಿಗೆ ಪುನರಾಯ್ಕೆಗೊಂಡರು. ಕಾಂ. ಸಿ ಎಸ್. ಮಂಜುಳಾ (ರಾಜ್ಯ ಎಸ್ ಎಫ್ ಐ. ಸಹಕಾರ್ಯದರ್ಶಿನಿ) ರವರು ಹೊಸದಾಗಿ ಕೇಂದ್ರ ಸಮಿತಿಗೆ ಆಯ್ಕೆಯಾದರು. ಹಿಂದಿನ ಕೇಂದ್ರ ಸಮಿತಿಯ ಅಧ್ಯಕ್ಷರಾಗಿದ್ದ ಕಾಂ. ಎಂ ಎ ಬೇಬಿ ಸೇರಿದಂತೆ 26 ಜನ ಸದಸ್ಯರನ್ನು ಭಾವೋದ್ವೇಗದ ವಾತಾವರಣದಲ್ಲಿ ನೆನಪಿನ ಕಾಣಿಕೆಯನ್ನು ನೀಡಿ ಬೀಳ್ಕೊಡಲಾಯಿತು.

## ಐಕ್ಯ ಹೋರಾಟಕ್ಕೆ ಕರೆ

ರಾಷ್ಟ್ರದಾದ್ಯಂತ ಐಕ್ಯ ಹೋರಾಟವನ್ನು ಬಲಪಡಿಸಬೇಕೆಂದು ಅಖಿಲ ಭಾರತ ಸಮ್ಮೇಳನವು ಕರೆ ನೀಡಿದೆ. ದೇಶದ ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಐಕ್ಯ ಕಾರ್ಯಾಚರಣೆಯು ತಕ್ಷಣದ ಚಾರಿತ್ರಿಕ ಅನಿವಾರ್ಯ ಅವಶ್ಯಕತೆಯಾಗಿದೆ ಎಂದು ಸಮ್ಮೇಳನ ಐಕ್ಯ ಹೋರಾಟದ ಮಹತ್ವವನ್ನು ಸಾರಿದೆ. ವಿದ್ಯಾರ್ಥಿ ಸಮಸ್ಯೆಗಳ ಆಧಾರದಲ್ಲಿ ಸಮಾನ ಧೋರಣೆಯ ಇತರೆ ಎಡ ಪ್ರಜಾಪ್ರಭುತ್ವವಾದಿ ವಿದ್ಯಾರ್ಥಿ ಸಂಘಟನೆಗಳನ್ನು ಒಗ್ಗೂಡಿಸಲು ಎಸ್. ಎಫ್ ಐ ಮುಂಚೂಣಿಯಲ್ಲಿ ನಿಲ್ಲಬೇಕೆಂದು 5ನೇ ಅಖಿಲ ಭಾರತ ಸಮ್ಮೇಳನವು ಕರೆ ನೀಡಿದೆ

## ಮುಂದಿನ ದಿನಗಳ ಕರ್ತವ್ಯಗಳ ಕರೆ

ದೇಶದ ಐಕ್ಯತೆಯ ರಕ್ಷಣೆಗಾಗಿ, ಜಾಗತಿಕ ಶಾಂತಿಗಾಗಿ, ವಿರೋಧ ಪಕ್ಷಗಳ ಸರಕಾರಗಳ ರಕ್ಷಣೆಗಾಗಿ ವಿದ್ಯಾರ್ಥಿಗಳು ತೀವ್ರ ಚಳುವಳಿ ನಡೆಸಲು 5ನೇ ರಾಷ್ಟ್ರ ಸಮ್ಮೇಳನವು ಕರೆ ನೀಡಿತು. ಮುಂಬರುವ ದಿನಗಳು ಮತ್ತಷ್ಟು ಹೋರಾಟಮಯ ದಿನಗಳಾಗಲಿದ್ದು, ಎಸ್.ಎಫ್ ಐ ವಿದ್ಯಾರ್ಥಿಗಳು ತಮ್ಮ ಸಂಘಟನೆಯ ಬೆಳವಣಿಗೆಗೆ ಗಮನ ನೀಡುವುದರೊಂದಿಗೆ ಇತರ ಜನವರ್ಗದ ಸಂಘಟನೆಗಳ ಬೆಳವಣಿಗೆಗೂ ನೆರವಾಗಬೇಕೆಂದು ಸಮ್ಮೇಳನವು ಕರೆ ನೀಡಿತು. ಗ್ರಾಮೀಣ ಪ್ರದೇಶಗಳಲ್ಲಿ ಸಂಘಟನೆ ಬಲಪಡಿಸಲು, ವಿಸ್ತರಿಸಲು ವಿಶೇಶ ಗಮನ ನೀಡಲು ಸಮ್ಮೇಳನ ಆದ್ಯತೆ ನೀಡಿತು. ಅಭ್ಯಾಸ ಮತ್ತು ಹೋರಾಟ ಘೋಷಣೆಯೊಂದಿಗೆ "ಎಸ್ ಎಫ್.ಐ. ಸದಸ್ಯ ಒಬ್ಬ ಪರಿಪೂರ್ಣ ವಿದ್ಯಾರ್ಥಿ" ಎಂಬ ಮತ್ತೊಂದು ಮಹತ್ವದ ಘೋಷಣೆಯನ್ನು ನೀಡಿದ 5ನೇ ರಾಷ್ಟ್ರ ಸಮ್ಮೇಳನವು ಎಸ್. ಎಫ್ ಐ ಸದಸ್ಯರು ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಪರಿಪೂರ್ಣತೆ ಪಡೆಯಲು ಪ್ರಯತ್ನಿಸಬೇಕೆಂದು ಕರೆ ನೀಡಿತು. ವೈರಿಗಳ ದಾಳಿಯನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿ ಸಂಘಟನೆಯನ್ನು ಉಳಿಸಿದ ಅಸ್ಸಾಂ ಮತ್ತು ಪಂಜಾಬಿನ ಧೀರ ಸಂಗಾತಿಯನ್ನು ಸಮ್ಮೇಳನವು ಅಭಿನಂದಿಸಿತು. ಬಾಂಬೆ ಸಮ್ಮೇಳನದಿಂದ ಈ ಸಮ್ಮೇಳನದವರೆಗಿನ ಅವಧಿಯಲ್ಲಿ 25 ಸಂಗಾತಿಗಳು ಪ್ರತಿಗಾಮಿ ಸಂಘಟನೆಗಳ ದಾಳಿಗೆ ಬಲಿಯಾಗಿರುವುದನ್ನು ತೀವ್ರ ದುಃಖದಿಂದ ನೆನಪಿಸಿಕೊಂಡ ಸಮ್ಮೇಳನವು ಹುತಾತ್ಮ ಸಂಗಾತಿಗಳ ಬದುಕು ನಮ್ಮ ಸಂಘಟನೆಯನ್ನು ಮುನ್ನಡೆಸಲು ಸ್ಫೂರ್ತಿದಾಯಕವಾಗಲೆಂದು ಹಾರೈಸುತ್ತಾ "ಕೊಲೆ ರಾಜಕೀಯ" ನಡೆಸುತ್ತಿರುವ ವೈರಿ ಸಂಘಟನೆಗಳಿಗೆ "ನಿದ್ರೆಯಲ್ಲೂ ಭಯದಿಂದ ಕನವರಿಸುವ ಪರಿಸ್ಥಿತಿಯನ್ನು ನಿರ್ಮಿಸಿಯೇವು ಜಾಗ್ರತೆ" ಎಂದು ಎಚ್ಚರಿಸಿತು.

ಎಸ್.ಎಫ್ ಐ.ನ 5ನೇ ರಾಷ್ಟ್ರ ಸಮ್ಮೇಳನ ಸಂಘಟನೆಯ ಬೆಳವಣಿಗೆಗೆ ಹೊಸ ಸ್ಫೂರ್ತಿಯನ್ನು ನೀಡಿದ ಚಾರಿತ್ರಿಕ ಸಮ್ಮೇಳನವಾಗಿತ್ತು.

# ಎಸ್. ಎಫ್. ಐ.ನ ನೂತನ ರಾಜ್ಯ ಸಮಿತಿ

19°4ರ ಜನವರಿ 3 ರಿಂದ 5ರ ವರೆಗೆ ಬೆಂಗಳೂರಿನಲ್ಲಿ ನಡೆದ ಎಸ್. ಎಫ್. ಐ ನ ನಾಲ್ಕನೆಯ ರಾಜ್ಯ ಸಮ್ಮೇಳನದಲ್ಲಿ ಆಯ್ಕೆಯಾದ ರಾಜ್ಯ ಸಮಿತಿ ಸದಸ್ಯರ ಹಾಗೂ ನೂತನಪದಾಧಿಕಾರಿಗಳ ಪಟ್ಟಿಯನ್ನು ಕೆಳಗೆ ಕೊಡಲಾಗಿದೆ.

ಅಧ್ಯಕ್ಷರು ಆರ್. ಜಯಕುಮಾರ್, ಮೈಸೂರು. ಉಪಾಧ್ಯಕ್ಷರು ಎನ್. ರಾಜಣ್ಣ, ಬೆಂಗಳೂರು. ಎಸ್. ವೈ. ಗುರುಶಾಂತಪ್ಪ, ಬಳ್ಳಾರಿ. ಕಾರ್ಯದರ್ಶಿ ಎಸ್ ಆರ್. ಆರಾಧ್ಯ, ಬೆಂಗಳೂರು. ಸಹ ಕಾರ್ಯದರ್ಶಿ ಕೆ. ಪಿ. ವಿಶ್ವನಾಥ, ದ. ಕ. ಜಿಲ್ಲೆ. ಎಸ್ ಸಿ ಮಂಜುಳ, ರಾಯಚೂರು. ಬೈಯ್ಯಾರೆಡ್ಡಿ, ಕೋಲಾರ. ಖಜಾಂಚಿ ಕೆ. ಶಾಂತಕುಮಾರಿ, ಬೆಂಗಳೂರು.

### ಸದಸ್ಯರು

ಕೆ. ಬಸವರಾಜು ರಾಯಚೂರು, ಪ್ರಕಾಶ್‌ಹುಡ್ಯೇರಿ ಧಾರವಾಡ, ಡಿ. ಶಿವಶಂಕರ್ ಬೆಂಗಳೂರು, ಹರೀಂದ್ರ ಬೆಂಗಳೂರು ನರೇಗಲ್ ಬಿಜಾಪುರ, ಟಿ. ಎಂ ಶಿವರೆಡ್ಡಿ ಕೋಲಾರ. ವಿರೂಪಾಕ್ಷನಾಯಕ್ ಬಳ್ಳಾರಿ, ಸುನೀಲ್ ಕಾಟೀಕರ್ ದ. ಕನ್ನಡ ಜಿಲ್ಲೆ, ಶ್ರೀಪತಿ ಉ. ಕ. ಜಿಲ್ಲೆ, ಎಫ್. ಎಂ. ನಧಾಫ್ ಬೆಳಗಾವಿ, ಎಂ. ತೇಜಸ್ವಿನಿ ಬೆಂಗಳೂರು, ಕ್ಷೀರಕುಮಾರಸ್ವಾಮಿ ತುಮಕೂರು. ಬಂಜಗೆರೆ ಜಯಪ್ರಕಾಶ್ ಮೈಸೂರು.

**ಕೇಂದ್ರ ಸಮಿತಿ ನಿರ್ಣಯಗಳು**

# ವಿರೋಧ ಪಕ್ಷಗಳ ಜಂಟೀ ಕಾರ್ಯಕ್ರಮ ಸ್ವಾಗತಾರ್ಹ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಫೆಬ್ರವರಿ 4 ರಿಂದ 7 ರ ವರೆಗೆ ನವ ದೆಹಲಿಯಲ್ಲಿ ಸಭೆ ಸೇರಿತು. ಆರಂಭದಲ್ಲಿ ನಮ್ಮನ್ನಗಲಿದ ಸಂಗಾತಿಗಳಾದ ಕೇಂದ್ರ ಸಮಿತಿಯ ಸದಸ್ಯ ದೇಶ ರಾಜ್ ಚಡ್ಡಾ, ಮಹಾರಾಷ್ಟ್ರ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯ ಪಿ ಕೆ ಕುರಣೆ, ಪಶ್ಚಿಮ ಬಂಗಾಳ ರಾಜ್ಯ ಸಮಿತಿ ಸದಸ್ಯ ಸುನೀಲ್ ಬಸು, ರಾಜಸ್ತಾನ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯ ದುರ್ಗಾದಾಸ್ ತಿರಾಲಿ ಹಾಗೂ ದಿಲ್ಲಿ ರಾಜ್ಯ ಸಮಿತಿ ಸದಸ್ಯೆ ಅಶೋಕಲತಾ ಜೈನ್ ಇವರುಗಳಿಗೆ ಶ್ರದ್ಧಾಂಜಲಿ ಅರ್ಪಿಸಿದ ಮೇಲೆ ಕೇಂದ್ರ ಸಮಿತಿ ಹಲವು ನಿರ್ಣಯಗಳನ್ನು ಅಂಗೀಕರಿಸಿತು.

ನಿರುದ್ಯೋಗ, ಬಡತನ ಉಲ್ಬಣಗೊಳ್ಳುವಂತೆ ಮಾಡುತ್ತಿರುವ, ಜನಸಾಮಾನ್ಯರನ್ನು ಸಂಕಷ್ಟಗಳಿಗೀಡು ಮಾಡುತ್ತಿರುವ ಕಾಂಗ್ರೆಸ್ (ಐ) ಸರಕಾರದ ಆರ್ಥಿಕ ಧೋರಣೆಗಳ ವಿರುದ್ಧ 17 ವಿರೋಧ ಪಕ್ಷಗಳು ಫೆಬ್ರವರಿ 13 ರಿಂದ ಜಂಟಿಯಾಗಿ ಆರಂಭಿಸುವ ಕಾರ್ಯಕ್ರಮವನ್ನು ಸ್ವಾಗತಿಸಿರುವ ಕೇಂದ್ರ ಸಮಿತಿ ಇತರ ವಿರೋಧ ಪಕ್ಷಗಳೊಂದಿಗೆ ಸೇರಿಕೊಂಡು ಈ ಕಾರ್ಯಾಚರಣೆಗಳ ಅಪಾರ ಯಶಸ್ಸಿಗೆ ಶ್ರಮಿಸಬೇಕೆಂದು ಪಕ್ಷದ ಎಲ್ಲಾ ಘಟಕಗಳಿಗೆ ಕರೆ ನೀಡಿದೆ

ಕೇಂದ್ರ ಸಮಿತಿ ಅಂಗೀಕರಿಸಿದ ಇತರ ನಿರ್ಣಯಗಳನ್ನು ಈ ಮುಂದೆ ಕೊಡಲಾಗಿದೆ.

## ಶಾಂತಿಗಾಗಿ ಆಂದೋಲನ ಬಲಗೊಳ್ಳಬೇಕು

ನ್ಯೂಕ್ಲಿಯರ್ ಯುದ್ಧಾಪಾಯದ ವಿರುದ್ಧ ಮತ್ತು ಜಾಗತಿಕ ಶಾಂತಿಯ ಆಂದೋಲನವನ್ನು ಬಲಪಡಿಸಲು ಎಂಟು ಪಕ್ಷಗಳು ಯೋಜಿಸಿರುವುದನ್ನು ಕೇಂದ್ರ ಸಮಿತಿ ಸ್ವಾಗತಿಸಿದೆ ಪಶ್ಚಿಮ ಯುರೋಪಿನಲ್ಲಿ ಹೊಸ ಅಮೇರಿಕನ್ ಕ್ಷಿಪಣಿಗಳ ಸ್ಥಾಪನೆಯಿಂದಾಗಿ ನ್ಯೂಕ್ಲಿಯರ್ ಜಾಗತಿಕ ಯುದ್ಧದ ಅಪಾಯ ವಿಶಾಲಗೊಂಡಿದೆ

ಎಂಟು ಪಕ್ಷಗಳು ನೀಡಿರುವ ಜಂಟಿ ಹೇಳಿಕೆಯನ್ನು ಕೇಂದ್ರ ಸಮಿತಿ ಅನುಮೋದಿಸಿದೆ. ನ್ಯೂಕ್ಲಿಯರ್ ವಿನಾಶಕಾರಿಯ ಅಪಾಯದ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡಿಸಿ ರಾಜ್ಯಗಳ ರಾಜಧಾನಿಗಳಲ್ಲಿ ನಡೆಸಲು ಯೋಜಿಸಿರುವ ಶಾಂತಿ ಪ್ರದರ್ಶನಗಳಲ್ಲಿ ಜನತೆ ಅಪಾರ ಸಂಖ್ಯೆಯಲ್ಲಿ ಭಾಗವಹಿಸುವಂತೆ ಹಾಗೂ ದೆಹಲಿಯಲ್ಲಿ ಮಾರ್ಚ್ 8 ಹಾಗೂ 9 ರಂದು ಜರುಗಲಿರುವ ರಾಷ್ಟ್ರೀಯ ಸಮಾವೇಶಕ್ಕೆ ಭಾರೀ ಬೆಂಬಲ ದೊರೆಕುವಂತೆ ತಮ್ಮಿಂದ ಸಾಧ್ಯವಾದಷ್ಟು ಶ್ರಮಿಸಬೇಕೆಂದು ಎಲ್ಲಾ ಪಾರ್ಟಿ ಘಟಕಗಳಿಗೆ ಕೇಂದ್ರ ಸಮಿತಿ ಕರೆ ನೀಡಿದೆ

## ಎನ್. ಸಿ. ಸಿ. ಕಾರ್ಯಕ್ರಮಕ್ಕೆ ಬೆಂಬಲ

ಕಾರ್ಮಿಕ ಸಂಘಗಳ ರಾಷ್ಟ್ರೀಯ ಆಂದೋಲನ ಸಮಿತಿ ನವ ದೆಹಲಿಯಲ್ಲಿ ಜನವರಿ 20 ರಂದು ನಡೆಸಿದ ತನ್ನ ಅಖಿಲ-ಭಾರತ ಸಮಾವೇಶದಲ್ಲಿ ಲಾಕೌಟ್‌ಗಳು, ಕಾರ್ಖಾನೆ ಮುಚ್ಚುವುದು, ರಿಟ್ರೆಂಚ್‌ಮೆಂಟ್, ಲೇ-ಆಫ್ ಹಾಗೂ ಡಿನೋಟಿಫಿಕೇಶನ್ ಇವೆಲ್ಲವುಗಳ ವಿರುದ್ಧ ರೂಪಿಸಿರುವ ಕಾರ್ಯಕ್ರಮಕ್ಕೆ ಕೇಂದ್ರ ಸಮಿತಿ ತನ್ನ ಪೂರ್ಣ ಬೆಂಬಲ ನೀಡಿದೆ.

ಈ ಎಲ್ಲವುಗಳಿಂದಾಗಿ ಸೃಷ್ಟಿ ಗೊಂಡಿರುವ ಸಮಸ್ಯೆಯ ಗಂಭೀರ ಹಾಗೂ ಒಳ ಸ್ವರೂಪವನ್ನು ಸಮಾವೇಶದ ನಿರ್ಣಯ ಸುಸ್ಪಷ್ಟವಾಗಿ ಬಿಂಬಿಸುತ್ತದೆ. ಮಾರ್ಚ್ 15 ರೊಳಗೆ ಈ ಪ್ರಶ್ನೆಗಳ ಬಗ್ಗೆ ಕ್ಷೇತ್ರೀಯ ಹಾಗೂ ರಾಜ್ಯಮಟ್ಟದ ಸಮಾವೇಶವನ್ನು ನಡೆಸಲು, ಮಾರ್ಚ್ 19 ರಿಂದ 25 ರವರೆಗೆ ಒಂದುವಾರ ಸಮಾವೇಶ ನಿರೂಪಿಸಿರುವ ಬೇಡಿಕೆಗಳ ಬಗ್ಗೆ ಪ್ರಚಾರ ನಡೆಸಲು ಸಮಾವೇಶ ಕರೆ ನೀಡಿದೆ ಹಾಗೂ ಏಪ್ರಿಲ್ 19ರ "ಸಂಸತ್ತು ಚಲೋ" ಕಾರ್ಯಕ್ರಮವನ್ನು ಜನಪ್ರಿಯಗೊಳಿಸಿ ಸಾಕಷ್ಟು ಹೆಚ್ಚು ಸಂಖ್ಯೆಯಲ್ಲಿ ಕಾರ್ಮಿಕರು ಅದರಲ್ಲಿ ಪಾಲ್ಗೊಂಡರು. ಆಸಂದರ್ಭದಲ್ಲಿ ಬಂಧಿತರಾಗಲು ತಯಾರಾಗುವಂತೆ ಮಾಡಬೇಕೆಂದು ಸಮಾವೇಶ ಕರೆ ನೀಡಿದೆ

ಈ ಕಾರ್ಯಾಚರಣೆ ಪೂರ್ಣ ಯಶಸ್ವಿಯಾಗಲು ತಮ್ಮೆಲ್ಲಾ ಬಲವನ್ನು ಉಪಯೋಗಿಸಬೇಕೆಂದು ಕೇಂದ್ರ ಸಮಿತಿಯು ಪಕ್ಷದ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

## ಸೆಣಬು ಕಾರ್ಮಿಕರ ಮುಷ್ಕರಕ್ಕೆ ಬೆಂಬಲ

ಪಶ್ಚಿಮ ಬಂಗಾಳ ಹಾಗೂ ಇತರೆಡೆಗಳಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಸೆಣಬ ಕಾರ್ಮಿಕರು ಜನವರಿ 16 ರಿಂದ ಆರಂಭಿಸಿರುವ ಅನಿರ್ದಿಷ್ಟ ಕಾಲದ ಮುಷ್ಕರಕ್ಕೆ ಕೇಂದ್ರ ಸಮಿತಿ ತನ್ನ ಹಾರ್ದಿಕ ಬೆಂಬಲವನ್ನು ವ್ಯಕ್ತಪಡಿಸಿದೆ. ಇಂಟಕ್ ಕೂಡಾ ಸೇರಿರುವ ಸೆಣಬು ಕಾರ್ಮಿಕರ ಎಲ್ಲಾ ಸಂಘಟನೆಗಳ ನೇತೃತ್ವದಲ್ಲಿ ನಡೆಯುತ್ತಿರುವ ಈ ಸಂಪೂರ್ಣ ಐಕ್ಯ ಕಾರ್ಯಾಚರಣೆಯ ಮಹತ್ವವನ್ನು ಕೇಂದ್ರ ಸಮಿತಿ ಗಮನಿಸಿದೆ

ಸೆಣಬು ಗಿರಣಿ ಮಾಲಿಕರು ವರ್ಷಗಳಿಂದ ಅನುಸರಿಸುತ್ತಾ ಬಂದಿರುವ ಏಕದಂ ಪ್ರತಿಕ್ರಿಯಾವಾದಿ, ಕಾರ್ಮಿಕ ವಿರೋಧಿ ಹಾಗೂ ರಾಷ್ಟ್ರವಿರೋಧಿ ಧೋರಣೆಗಳಿಂದಾಗಿ ಕಾರ್ಮಿಕರು ನಿರ್ವಾಹವಿಲ್ಲದೆ ಮುಷ್ಕರ ನಡೆಸುವಂತಾಗಿದೆ.

ಸೆಣಬು ಕೈಗಾರಿಕೆಯಲ್ಲಿ ಕಾರ್ಖಾನೆಗಳು ಮುಚ್ಚುವುದು, ಬೀಗ ಮುದ್ರೆಗಳು 1983 ರಲ್ಲಿ ತುತ್ತ ತುದಿ ತಲುಪಿದವು. ಒಂದು ಹಂತದಲ್ಲಿ 21 ಗಿರಣಿಗಳು ಮುಚ್ಚಿದ್ದವು. ಪರಿಹಾರವಿಲ್ಲದೆ ಸಾವಿರಾರು ಕಾರ್ಮಿಕರಿಗೆ ಲೇ-ಆಫ್ ಕೊಡಲಾಗಿದೆ. ಶ್ರಮ ಭಾರವನ್ನು ಮನ ಬಂದಂತೆ, ವ್ಯವಸ್ಥಿತವಾಗಿ ಹೆಚ್ಚಿಸುತ್ತಾ ಬರಲಾಗಿದೆ. ಇದರಿಂದಾಗಿ 1947 ರಲ್ಲಿ ಈ ಉದ್ಯಮದಲ್ಲಿ 3 ಲಕ್ಷ ಕಾರ್ಮಿಕರಿದ್ದರೆ, ಈಗ ಅದು ಕೇವಲ ಎರಡು ಲಕ್ಷಕ್ಕಿಂತ ಸ್ವಲ್ಪ ಹೆಚ್ಚಿದೆ.

1979 ರಿಂದೀಚೆಗೆ ಈ ಕೈಗಾರಿಕೆಯಲ್ಲಿ ಕೂಲಿ ದರದ ಪರಿಷ್ಕರಣೆಯಾಗಿಲ್ಲ ಈಗಿನ ಕೂಲಿ ದರ ಇತರ ಪ್ರಮುಖ ಉದ್ಯಮಗಳ ಕೂಲಿ ದರಕ್ಕಿಂತ ಬಹಳ ಕಮ್ಮಿಯಿದೆ. ಬದಲೀ ಕಾರ್ಮಿಕರ ಬಗ್ಗೆ ರಘುನಾಥ ರೆಡ್ಡಿ ಅವಾರ್ಡನ್ನು ಪಾಲಿಸಲು ಮಾಲಿಕರು ನಿರಾಕರಿಸಿದರು ವೇತನ ಶ್ರೇಣಿ ಹಾಗೂ ಗ್ರೇಡ್‌ಗಳು ಮತ್ತು ತುರ್ತು ಪರಿಸ್ಥಿತಿಯ ಮೊದಲಿನ ಶ್ರಮ ಭಾರ ವ್ಯವಸ್ಥೆಗೆ ಹಿಂದಿರುಗುವುದರ ಬಗ್ಗೆ 1979 ರಲ್ಲಿ ಪಶ್ಚಿಮ ಬಂಗಾಳದ ಕಾರ್ಮಿಕ ಮಂತ್ರಿಗಳು ನೀಡಿದ ಅವಾರ್ಡ್‌ಗಳನ್ನೂ ಬಹಿರಂಗವಾಗಿಯೇ ಈ ಮಾಲಿಕರು ತಿರಸ್ಕರಿಸಿದರು.

ಈ ಸೆಣಬು ಗುತ್ತೇದಾರಗಳ ಧೋರಣೆಯನ್ನೇ ಕೇಂದ್ರ ಸರಕಾರದ ಅಧೀನದಲ್ಲಿರುವ ಆರು ರಾಷ್ಟ್ರೀಕೃತ ಗಿರಣಿಗಳೂ ಅನುಸರಿಸುತ್ತಿರುವುದು ಖಂಡನಾರ್ಹ ಎಂದು ಕೇಂದ್ರ ಸಮಿತಿ ಹೇಳಿದೆ ಸೆಣಬು ಮಿಲ್ ಮಾಲಿಕರ ಲಾಭಕೋರ ಚಟುವಟಿಕೆಗಳಿಗೆ ಉತ್ತೇಜನ ಕೊಡುವ, ಸತತವಾಗಿ ಅವರ ಮನವೊಲಿಸುವ ಕೇಂದ್ರ ಸರಕಾರದ ನೀತಿಗೆ ಇದು ಅನುಗುಣವಾಗಿಯೇ ಇದೆ. ಈ ಮಾಲಿಕರಿಗೆ ನೀಡಿರುವ ಸಾಕಷ್ಟು ಪ್ರಮಾಣದ ಸಾಲಗಳು, ರಫ್ತು ಸಹಾಯ ಧನ ಇತ್ಯಾದಿಗಳು ಕಾರ್ಮಿಕರ ಅಥವಾ ಕಚ್ಚಾ ಸೆಣಬಿನ ಉತ್ಪಾದಕರ ರಕ್ಷಣೆಗಾಗಲೀ, ಸ್ವತಃ ಸೆಣಬು ಉದ್ಯಮದ ಹಿತಾಸಕ್ತಿಗಳ ರಕ್ಷಣೆಗಾಗಲಿ ಉಪಯೋಗಕ್ಕೆ ಬಂದಿಲ್ಲ.

ಸೆಣಬು ಕಾರ್ಮಿಕರು ಅನಿರ್ದಿಷ್ಟ ಕಾಲ ಮುಷ್ಕರ ಹೂಡಿರುವುದು ತಮ್ಮ ತಕ್ಷಣದ ಆರ್ಥಿಕ ಬೇಡಿಕೆಗಳಿಗೆ ಮಾತ್ರವಲ್ಲ, ಕಚ್ಚಾ ಸೆಣಬು ವ್ಯಾಪಾರದಿಂದ ಹಿಡಿದು ಸೆಣಬು ಉತ್ಪಾದನೆಗಳ ರಫ್ತಿನವರೆಗೆ ಸಮಸ್ತ ಸೆಣಬು ಕೈಗಾರಿಕೆಯನ್ನು ರಾಷ್ಟ್ರೀಕರಿಸಬೇಕೆಂಬ ಬೇಡಿಕೆಯನ್ನು ಒತ್ತಾಯಿಸಲು ಕೂಡಾ ಆಡಳಿತ ನಿರ್ವಹಣೆಯ ಪ್ರಜಾಸತ್ತಾತ್ಮಕ ವ್ಯವಸ್ಥೆ ಹಾಗೂ ಜನಪ್ರಿಯ ಉಸ್ತುವಾರಿಯಿರುವ ರಾಷ್ಟ್ರೀಕರಣದ ಈ ಬೇಡಿಕೆಗೆ ಕೇಂದ್ರ ಸಮಿತಿ ತನ್ನ ಪೂರ್ಣ ಬೆಂಬಲ ವ್ಯಕ್ತಪಡಿಸಿದೆ. ಯಾಕೆಂದರೆ ಇದರ ಹೊರತು ಸೆಣಬು ಉದ್ಯಮಕ್ಕೆ ಮುಕ್ತಿಯಾಗಲೀ, ಕಾರ್ಮಿಕರಿಗೆ ಹಾಗು ಸೆಣಬು ಬೆಳೆಗಾರರಿಗೆ ನ್ಯಾಯ ದೊರಕುವುದಾಗಲೀ ಸಾಧ್ಯವಿಲ್ಲ. ಈ ಬೇಡಿಕೆಯನ್ನು ಬೆಂಬಲಿಸುತ್ತಾ ಕೇಂದ್ರ ಸಮಿತಿಯು ಸೆಣಬು ಉದ್ಯಮ ಹಾಗೂ ವ್ಯಾಪಾರವನ್ನು ತಕ್ಷಣ ರಾಷ್ಟ್ರೀಕರಿಸಬೇಕೆಂದು ಭಾರತ ಸರಕಾರವನ್ನು ಒತ್ತಾಯಿಸಿದೆ ಮುಷ್ಕರ ನಿರತ ಕಾರ್ಮಿಕರ ಇತರ ಬೇಡಿಕೆಗಳಾದ ವೇತನ ಹೆಚ್ಚಳ, ಸಾಮೂಹಿಕ ರಿಟ್ರೆಂಚ್‌ಮೆಂಟಿನ ಹಾಗೂ ವೇತನವನ್ನು ಉತ್ಪಾದಕತೆಯೊಂದಿಗೆ ಗಂಟು ಹಾಕುವ ಬೆದರಿಕೆಯ ವಿರುದ್ಧ ಪ್ರತಿಭಟನೆಗೆ ಕೇಂದ್ರ ಸಮಿತಿ ತನ್ನ ಬೆಂಬಲ ಸೂಚಿಸಿದೆ

ಮಾತುಕತೆಯ ಮೂಲಕ ಮುಷ್ಕರವನ್ನು ಪರಿಹರಿಸಲು ಪಶ್ಚಿಮ ಬಂಗಾಳ ರಾಜ್ಯ ಸರಕಾರ ನಡೆಸುತ್ತಿರುವ ಪ್ರಯತ್ನಗಳಿಗೆ ಎಲ್ಲಾ ರೀತಿಯ ಬೆಂಬಲ ನೀಡಬೇಕೆಂದು ಕೇಂದ್ರ ಸರಕಾರವನ್ನು ಕೇಂದ್ರ ಸಮಿತಿ ಒತ್ತಾಯಿಸಿದೆ

ಪಶ್ಚಿಮ ಬಂಗಾಳ ಹಾಗೂ ಇತರೆಡೆಗಳಲ್ಲಿ ಈ ಯಶಸ್ವೀ ಸಂಪೂರ್ಣ ಮುಷ್ಕರ ನಡೆಸುತ್ತಿರುವ ಸೆಣಬು ಕಾರ್ಮಿಕರನ್ನು ಕೇಂದ್ರ ಸಮಿತಿ ಅಭಿನಂದಿಸಿದೆ. ಸುಗ್ರೀವಾಜ್ಞೆಯ ಮೂಲಕ ಈ ಮುಷ್ಕರವನ್ನು ನಿಷೇಧಿಸಿರುವ ಉತ್ತರ ಪ್ರದೇಶ ಸರಕಾರವನ್ನು ಖಂಡಿಸಿರುವ ಕೇಂದ್ರ ಸಮಿತಿ ಅದನ್ನು ವಾಪಸ್ಸು ಪಡೆಯಬೇಕೆಂದು ಒತ್ತಾಯಿಸಿದೆ.

ಮುಷ್ಕರ ನಿರತ ಸೆಣಬು ಕಾರ್ಮಿಕರಿಗೆ ತಮ್ಮ ಬೆಂಬಲ ಹಾಗೂ ಸೌಹಾರ್ದವನ್ನು ವ್ಯಕ್ತಪಡಿಸಬೇಕೆಂದು ಬೇರೆ ಕೈಗಾರಿಕೆಗಳಲ್ಲಿರುವ ಕಾರ್ಮಿಕರಿಗೆ, ಎಲ್ಲಾ ಕಾರ್ಮಿಕ ಸಂಘಗಳಿಗೆ ಹಾಗೂ ಒಕ್ಕೂಟಗಳಿಗೆ ಕೇಂದ್ರ ಸಮಿತಿ ಕರೆ ನೀಡಿದೆ.

## ಉರಣ್ ರೈತರ ಬೇಡಿಕೆಗಳಿಗೆ ಬೆಂಬಲ

ಜನವರಿ 31 ರಂದು ಯಶಸ್ವೀ ಪೂರ್ಣ ಬಂದ್ ಸಂಘಟಿಸಿದ ಮುಂಬೈ ನಗರದ ಕಾರ್ಮಿಕ ವರ್ಗವನ್ನು ಹಾಗೂ ಜನತೆಯನ್ನು ಕೇಂದ್ರ ಸಮಿತಿ ಅಭಿನಂದಿಸಿದೆ. ಉರಣ್‌ನ ರೈತರ ಬೇಡಿಕೆಗಳ ಬೆಂಬಲಾರ್ಥ ಹಾಗೂ ಅವರ ಮೇಲೆ ಪೋಲೀಸರ ಬರ್ಬರತೆಯನ್ನು ಪ್ರತಿಭಟಿಸಿ ಕಾರ್ಯಾಚರಣೆಗೆ ಕರೆಯಿತ್ತ ಮಹಾರಾಷ್ಟ್ರದ ಎಲ್ಲಾ ವಿರೋಧ ಪಕ್ಷಗಳನ್ನೂ ಕೇಂದ್ರ ಸಮಿತಿ ಅಭಿನಂದಿಸಿದೆ.

ಮಹಾರಾಷ್ಟ್ರ ಸರಕಾರ ಉರಣ್‌ನ ರೈತರ ಜಮೀನನ್ನು ನವ ಶೇವಾ ಬಂದರು ಯೋಜನೆಗಾಗಿ ವಶಪಡಿಸಿಕೊಳ್ಳುತ್ತಿದೆ. ಹಿಂದಿನ ಒಂದು ಕಾಂಗ್ರೆಸ್ (ಐ) ಸರಕಾರ ಎಕ್ರೆಗೆ 40,000 ರೂಪಾಯಿಯಂತೆ ಪರಿಹಾರ ನೀಡಲು ಒಪ್ಪಿತ್ತು. ಈಗಿನ ಕಾಂಗ್ರೆಸ್ (ಐ) ಸರಕಾರ ಅದನ್ನು 27000 ರೂಪಾಯಿಗಿಳಿಸಿದೆ ಮಾತ್ರವಲ್ಲ ಅದನ್ನು ಕೃಷಿ ಜಮೀನಿಗೆ ಮಾತ್ರ ಸೀಮಿತಗೊಳಿಸಿದೆ. ಉಪ್ಪು ತಯಾರಿಕಾ ಜಮೀನುಗಳಿಗೆ ಯಾವ ಪರಿಹಾರವೂ ಇಲ್ಲ. ಜಾಗತಿಕ ಬ್ಯಾಂಕ್ ತಕ್ಷಣ ಜಮೀನು ಸ್ವಾಧೀನ ಪಡಿಸಿಕೊಳ್ಳಬೇಕೆಂದು ಸರಕಾರದ ಮೇಲೆ ಒತ್ತಾಯ ತರುತ್ತಿರುವುದರಿಂದ ಅದು ಅವಸರವಸರವಾಗಿ ಜಮೀನು ಸ್ವಾಧೀನ ಪಡಿಸಿ ಕೊಳ್ಳಲಾರಂಭಿಸಿದೆ. ರೈತರು ಇದನ್ನು ಪ್ರತಿಭಟಿಸುತ್ತಿದ್ದಾರೆ. ಈ ಮೊದಲು ಒಪ್ಪಿರುವ 40000 ರೂಪಾಯಿಗಳ ಪರಿಹಾರವನ್ನೇ ನೀಡಬೇಕೆಂದು ಕೇಳುತ್ತಿದ್ದಾರೆ. ಇವರಲ್ಲಿ ಹೆಚ್ಚಿನವರು ಸಣ್ಣ ಮಾಲಿಕರು. ಸರಕಾರ ಈಗ ನೀಡುತ್ತೇನೆನ್ನುವ ಹಣವನ್ನು ಸ್ವೀಕರಿಸಿದರೆ ಅವರ ಸರ್ವನಾಶವಾಗುತ್ತದೆ.

ಪ್ರತಿಭಟಿಸುತ್ತಿದ್ದ ರೈತರ ಮೇಲೆ ಸರಕಾರ ಸಶಸ್ತ್ರ ಪೋಲೀಸರನ್ನು ಹರಿಯಬಿಟ್ಟಿದೆ. ಆ ಕ್ಷೇತ್ರದಲ್ಲಿ ಒಂದು ರೀತಿಯ ಪೋಲಿಸ್ ರಾಜ್ಯ ನಡೆಯುತ್ತಿದೆ. ಆ ಪ್ರದೇಶವನ್ನು ಪೂರ್ಣವಾಗಿ ಮುತ್ತಿ ಬಂಧನ, ಲಾಠಿ ಪ್ರಹಾರ, ಗೋಲೀಬಾರ್ ನಡೆಸಲಾಗುತ್ತಿದೆ. ಐವರು ಕೊಲ್ಲಲ್ಪಟ್ಟಿದ್ದಾರೆ. ನೂರಾರು ಪುರುಷರು, ಮಹಿಳೆಯರು, ಮಕ್ಕಳು ಗಾಯಗೊಂಡಿದ್ದಾರೆ. ಇನ್ನೂ ಬಹಳ ಮಂದಿ ಬಂಧನದಲ್ಲಿದ್ದಾರೆ. ಪೋಲೀಸರ ಬರ್ಬರ ಹಲ್ಲೆಯನ್ನೂ ಸ್ವತಃ ರೈತರಿಗೆ ಬೆಂಬಲದ ಭರವಸೆ ನೀಡಲು ಹೋದ. ವಿರೋಧ ಪಕ್ಷಗಳ ನಾಯಕರನ್ನು ಬಂಧಿಸಲಾಗಿದೆ.

ಈ ಅಮಾನವೀಯ ಪೋಲೀಸ್ ದಮನವನ್ನು ಖಂಡಿಸಿರುವ ಕೇಂದ್ರ ಸಮಿತಿ ಹಿಂದೆ ಒಪ್ಪಿದ್ದ ಪರಿಹಾರ ನೀಡಬೇಕೆಂಬ ರೈತರ ಬೇಡಿಕೆಗೆ ತನ್ನ ಪೂರ್ಣ ಬೆಂಬಲ ವ್ಯಕ್ತ ಪಡಿಸಿದೆ. ಸರಕಾರ ತಕ್ಷಣ ದಮನವನ್ನು ನಿಲ್ಲಿಸಿ ರೈತರ ಬೇಡಿಕೆಯನ್ನು ಮನ್ನಿಸಬೇಕೆಂದು ಒತ್ತಾಯಿಸಿದೆ.

## ಮ್ಹಾತ್ರೆ ಕೊಲೆಯ ಖಂಡನೆ

ಬ್ರಿಟನ್ನಿನಲ್ಲಿ ಭಾರತದ ರಾಯಭಾರ ಕಚೇರಿಗೆ ಸೇರಿದ ಅಧಿಕಾರಿ ಶ್ರೀ ಆರ್. ಹೆಚ್. ಮ್ಹಾತ್ರೆಯವರ ಕೊಲೆಯ ಸುದ್ದಿ ಆಘಾತಕಾರಿಯೆಂದು ಕೇಂದ್ರ ಸಮಿತಿ ಹೇಳಿದೆ. ಈ ರಾಕ್ಷಸೀ ತಿಳಿಗೇಡಿ ಕೃತ್ಯವನ್ನು ನಡೆಸಿದ ಶಕ್ತಿಗಳನ್ನು ಅದು ಬಲವಾಗಿ ಖಂಡಿಸಿದೆ

ಶ್ರೀ ಮ್ಹಾತ್ರೆಯವರ ದುಃಖತಪ್ತ ಕುಟುಂಬಕ್ಕೆ ತನ್ನ ಹೃದಯಪೂರ್ವಕ ಸಂತಾಪವನ್ನು ಕೇಂದ್ರ ಸಮಿತಿ ವ್ಯಕ್ತಪಡಿಸಿದೆ.

# ಸೆಣಬು ಕೆಲಸಗಾರರ ಹೋರಾಟಕ್ಕೆ ಬೆಂಬಲ

ಜನವರಿ 16 ರಿಂದ ಪಶ್ಚಿಮ ಬಂಗಾಲ, ಆಂಧ್ರ, ಉತ್ತರ ಪ್ರದೇಶ ಹಾಗೆಯೇ ದೇಶದ ಇನ್ನಿತರ ಪ್ರದೇಶಗಳಲ್ಲಿಯು ಎರಡೂವರೆ ಲಕ್ಷ ನಾರು ಕೆಲಸಗಾರರು ಅನಿರ್ಧಿಷ್ಟ ಅವಧಿಯ ಮುಷ್ಕರ ಹೂಡಿದ್ದಾರೆ. ತಮ್ಮ ಆರ್ಥಿಕ ಬೇಡಿಕೆಗಳ ಜೊತೆಯಲ್ಲಿ ನಾರು ಕಾರ್ಖಾನೆಗಳನ್ನು ರಾಷ್ಟ್ರೀಕರಿಸಬೇಕೆಂಬ ಬೇಡಿಕೆಯನ್ನು ಮುಂದಿಟ್ಟಿದ್ದಾರೆ.

1983 ರಲ್ಲಿ 21 ಗಿರಣಿಗಳು ಮುಚ್ಚಲ್ಪಟ್ಟಿದ್ದವು ಅಥವಾ ಲಾಕೌಟಿಗೆ ಒಳಗಾಗಿದ್ದವು ಯಾವ ಪರಿಹಾರವಿಲ್ಲದೆ ಸಾವಿರಾರು ಕಾರ್ಮಿಕರು ಬೀದಿ ಪಾಲಾಗಿದ್ದರು. ಅನ್ಯಾಯವಾಗಿ ಕೆಲಸದ ಭಾರವನ್ನು ಹೆಚ್ಚಿಸಿದ ಕಾರಣದಿಂದಾಗಿ 1947 ರಲ್ಲಿ 3 ಲಕ್ಷಕ್ಕೂ ಮೇಲ್ಪಟ್ಟಿದ್ದ ಕಾರ್ಮಿಕರ ಸಂಖ್ಯೆ ಈಗ 2 ಲಕ್ಷದಷ್ಟಾಗಿದೆ. 1979 ರಿಂದ ಸಂಬಳ ಹೆಚ್ಚಾಗಲಿಲ್ಲ, ಬದ್ಲಿ ಕೆಲಸಗಾರರ ಕುರಿತು ರಘುನಾಥ ರೆಡ್ಡಿಯವರ ತೀರ್ಮಾನವನ್ನಾಗಲಿ ಸಂಬಳದ ಕುರಿತು ಪಶ್ಚಿಮ ಬಂಗಾಲದ ಕಾರ್ಮಿಕ ಮಂತ್ರಿಯವರ ನಿರ್ಣಯವನ್ನಾಗಲೀ ಕಾರ್ಖಾನೆ ಮಾಲಿಕರು 1979 ರಿಂದಲೂ ಜ್ಯಾರಿಯಲ್ಲಿ ತರಲಿಲ್ಲ

ಕೇಂದ್ರ ಸರಕಾರದ ಅಧೀನದಲ್ಲಿರುವ 6 ರಾಷ್ಟ್ರೀಕೃತ ಕಾರ್ಖಾನೆಗಳು ಕೂಡ ಖಾಸಗೀ ಮಾಲಕರಂತೆಯೇ ವರ್ತಿಸುತ್ತಿರುವುದು ಖಂಡನೀಯ. ನಾರು ಕೈಗಾರಿಕೆಗೆ ಕೇಂದ್ರ ಸರಕಾರ ಸಾಕಷ್ಟು ಹಣಸಹಾಯ ಮಾಡುತ್ತಿದ್ದರೂ ಕೂಡ ಇಂಥ ಸಹಾಯ ಮಾಲಕರ ಲಾಭವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸಹಾಯವಾಗಿದೆಯಲ್ಲದೆ, ಕಾರ್ಮಿಕರು ಬೇಡಿಕೆಗಳನ್ನು ಪಡೆಯುವುದಕ್ಕಲ್ಲ.

ಸಿ ಪಿ ಐ (ಎಂ)ನ ಕೇಂದ್ರ ಸಮಿತಿ ನಾರಿನ ಕಾರ್ಖಾನೆ ರಾಷ್ಟ್ರೀಕರಿಸಲ್ಪಡಬೇಕೆಂದೂ, ವೇತನ ಹೆಚ್ಚಾಗಬೇಕೆಂದೂ ಬೇಡಿ ಅನಿರ್ದಿಷ್ಟ ಮುಷ್ಕರ ಹೂಡಿರುವ ನಾರು ಕೆಲಸಗಾರರ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡುತ್ತದೆ. ಹಾಗೆಯೇ ಈ ಮುಷ್ಕರವನ್ನು ಚರ್ಚೆ ಮೂಲಕ ಬಗೆಹರಿಸಲು ಪಶ್ಚಿಮ ಬಂಗಾಲದ ಸರಕಾರ ಕೈಗೊಂಡಿರುವ ಪ್ರಯತ್ನದಲ್ಲಿ ಕೇಂದ್ರ ಸರಕಾರ ಸಹಕರಿಸಬೇಕೆಂದು ಕೇಳಿಕೊಳ್ಳುತ್ತದೆ

ಪಶ್ಚಿಮ ಬಂಗಾಲದ ವಿಧಾನ ಸಭೆ ತನ್ನ ಸರ್ವಾನುಮತದ ನಿರ್ಣಯದಲ್ಲಿ ನಾರು ಕೈಗಾರಿಕೆಯನ್ನು ರಾಷ್ಟ್ರೀಕರಿಸಬೇಕೆಂದು ಕೇಳಿಕೊಂಡಿದೆ ಪ. ಬಂಗಾಲ ಅಸೆಂಬ್ಲಿಯ ಎಲ್ಲ ಪಕ್ಷಗಳ ಸದಸ್ಯರ ಪ್ರತಿನಿಧಿಗಳು ಇಂದಿರಾ ಗಾಂಧಿಯವರನ್ನು ಭೆಟ್ಟಿಯಾಗಿ ನಾರು ಕೈಗಾರಿಕೆಯನ್ನು ರಾಷ್ಟ್ರೀಕರಣ ಮಾಡಬೇಕೆಂದು ಕೇಳಿಕೊಂಡಿದ್ದಾರೆ.

ಸಿ. ಐ. ಟಿ. ಯು ಕೇಂದ್ರ ಈ ಹೋರಾಟಕ್ಕೆ ಬೆಂಬಲ ನೀಡಿದೆಯಷ್ಟೇ ಅಲ್ಲ ದೇಶದ ಎಲ್ಲಾ ಕಾರ್ಮಿಕ ಸಂಘಗಳು ನಾರು ಕೆಲಸಗಾರರ ಹೋರಾಟಕ್ಕೆ ಸಹಾನುಭೂತಿ ವ್ಯಕ್ತ ಮಾಡಿ ಕೇಂದ್ರ ಸರಕಾರ ಇವರ ಸಮಸ್ಯೆ ಬಗೆಹರಿಸಲು ಕೂಡಲೇ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಬೇಕೆಂದು ಕೇಳಿಕೊಂಡಿದೆ.

### ಲೇಸರ್ ಆಯುಧಗಳ ಬಳಕೆ

# ಪೆಂಟಗಾನ್‌ನ ರಾಕ್ಷಸೀಯ ಹಂಚಿಕೆಗಳು

"ದಿವ್ಯ ಜ್ಯೋತಿ" ಲೇಸರ್ ನಮ್ಮ ಕಾಲದ ಅದ್ಭುತ ಸಂಶೋಧನೆಗಳಲ್ಲೊಂದು, ಜೀವನದ ಹಲವು ಕ್ಷೇತ್ರಗಳಲ್ಲಿ ಅದನ್ನು ವ್ಯಾಪಕವಾಗಿ ಉಪಯುಕ್ತ ರೀತಿಯಲ್ಲಿ ಬಳಸಿಕೊಳ್ಳಲಾಗುತ್ತಿದೆ. ಅತ್ಯಂತ ಜಟಿಲ ಸ್ವರೂಪದ ಕಣ್ಣಿನ ಶಸ್ತ್ರಕ್ರಿಯೆಗಳನ್ನು ನಡೆಸಲು ನೇತ್ರ ವೈದ್ಯರು ಲೇಸರ್‌ಗಳ ನೆರವನ್ನು ಪಡೆಯುತ್ತಾರೆ ಇಂತಹ ಚಿಕಿತ್ಸಾ ವಿಧಾನ ಇನ್ನೂ ಪೂರ್ತಿ ಯಶಸ್ವಿಯಾಗಿಲ್ಲ. ಹೀಗಾಗಿ ಜಗತ್ತಿನಾದ್ಯಂತ ಅವುಗಳ ಬಳಕೆ ಹೆಚ್ಚಿಲ್ಲ.

ಲೇಸರ್ ಕಿರಣವನ್ನು ಈ ವರೆಗೂ ಶಾಂತಿಯುತ ಉದ್ದೇಶಗಳಿಗಾಗಿಯೇ ಬಳಸಲಾಗುತ್ತಿದೆ ಆದರೆ ಅಮೆರಿಕದ ಪೆಂಟಾಗನ್‌ನ ಅಧಿಕಾರಿಗಳು ಲೇಸರ್ ಕಿರಣವನ್ನು ಪ್ರಬಲ ಶಕ್ತಿ ಶಾಲಿಯಾದ ಆಯುಧವನ್ನಾಗಿ ಪರಿಗಣಿಸಿದ್ದಾರೆ ಇಂತಹ ಆಯುಧಗಳ ಮೂಲಕ ತಮ್ಮ ದುಷ್ಟ ಹಂಚಿಕೆಗಳನ್ನು ಈಡೇರಿಸಿಕೊಳ್ಳಲು ಅವರು ಯತ್ನಿಸುತ್ತಿದ್ದಾರೆ. ಪ್ರಾರಂಭದಲ್ಲಿ ಮಿಲಿಟರಿ ಸಾಧನ ಸಲಕರಣೆಗಳನ್ನು ನಾಶಗೊಳಿಸಲು ಮಾತ್ರ ಲೇಸರ್ ಬಳಕೆಯಾಗುತ್ತಿತ್ತು. ಆದರೆ ಇಂದು ಅವನ್ನು ಜನರ ವಿರುದ್ಧ ಬಳಸುವ ಪ್ರಯತ್ನಗಳು ನಡೆಯುತ್ತಿವೆ. ನೇತ್ರ ವೈದ್ಯರು ನೇತ್ರರೋಗಿಗೆ ದೃಷ್ಟಿಭಾಗ್ಯ ಒದಗಿಸಲು ಲೇಸರನ್ನು ಬಳಸುತ್ತಾರೆ ನಿಜ ಆದರೆ ಜನರನ್ನು ಅಂಧರನ್ನಾಗಿ ಮಾಡಲು ಅವನ್ನು ಬಳಸುವ ಪಾಪಿಕ ಹಂಚಿಕೆಗಳನ್ನು ಪೆಂಟಾಗನ್‌ನ ಮರಿಷ್ಮರು ರೂಪಿಸುತ್ತಿದ್ದಾರೆ.

ಜನರನ್ನು ಕುರುಡರನ್ನಾಗಿಸುವ ಲೇಸರ್ ಆಯುಧಗಳ ತಯಾರಿಕೆಗಾಗಿ 1985ರ ಅವಧಿಯಲ್ಲಿ ಪೆಂಟಾಗನ್ 20 ಮಿಲಿಯ ಡಾಲರುಗಳನ್ನು ತನ್ನ ಬಜೆಟಿನಲ್ಲಿ ಮೀಸಲಿರಿಸಿದೆ ಎಂದು ತಿಳಿದು ಬಂದಿದೆ

"ಚಮಚಗಳ ನೆರವಿನಿಂದ ಸೆರೆಯಾಳಿನ ಕಣ್ಣುಗಳನ್ನು ಕೀಳುವ ಬಗೆಯನ್ನು ಅಮೆರಿಕನ್ ಮಾರ್ಗದರ್ಶಿಯೊಬ್ಬರಿಂದ ತಾನು ಕಲಿತುಕೊಂಡೆ ಎಂದು ಎಲ್ ಸಾಲ್ವಡೊರ್‌ನಲ್ಲಿ ಅಮಾನುಷ ನರಹತ್ಯೆಗಳಲ್ಲಿ ತೊಡಗಿರುವ "ಸಾವಿನ ತುಕಡಿಗಳ" ನಾಯಕನೊಬ್ಬ ಇತ್ತೀಚೆಗೆ ಹೆಮ್ಮೆಯಿಂದ ಕೊಚ್ಚಿಕೊಂಡಿದ್ದ. ಆದರೆ ಪೆಂಟಗನ್‌ನ ಮರಿಷ್ಟರು ಇದಕ್ಕಿಂತಲೂ ಹೇಯವಾದ ಕಾರ್ಯರೀತಿಯನ್ನು ಪರ್ಯಾಲೋಚಿಸುತ್ತಿದ್ದಾರೆ. ಲೇಸರ್ ಕಿರಣಗಳ ಆಯುಧಗಳು ಕೆಲವು ಸೆಕುಂಡುಗಳ ಅವಧಿಯಲ್ಲಿ ಸಹಸ್ರಾರು ಮಂದಿಯನ್ನು ಅಂಧರನ್ನಾಗಿಸಬಲ್ಲವು. ದೂರದಿಂದಲೇ ಜನರ ಮೇಲೆ ಪ್ರಹಾರನೀಡಲು ಸಾಧ್ಯವಾಗುವುದರಿಂದ ಕೊಲೆಗಡುಕರ ಕೈಗಳು ಬಲಿಪಶುಗಳ ರಕ್ತದಿಂದ ಒದ್ದೆಯಾಗುವ ಸಮಸ್ಯೆಯೂ ಇಲ್ಲ. ಈ ಸೌಲಭ್ಯ ಇಂಡೋಚೀಣಾದ ರಕ್ಷಣಾಹೀನ ಜನತೆಯ ಮೇಲೆ ದಾಳಿಮಾಡಿದ ಬಿ-52 ಬಾಂಬರ್‌ಗಳ ಚಾಲಕರುಗಳಿಗೆ ಒದಗಿಸಿದ ಸೌಲಭ್ಯವನ್ನೇ ಹೋಲುತ್ತದೆ.

ಇಂತಹ ಬರ್ಬರ ಸ್ವರೂಪದ ಆಯುಧಗಳ ಬಗ್ಗೆ ಅಮೆರಿಕದ ರಕ್ಷಣಾ ಕಾರ್ಯದರ್ಶಿ ಕಾಸ್ಪರ್ ವೀನ್ ಹೆಮ್ಮೆತಾಳಿದ್ದಾರೆ. ಅವುಗಳು ನ್ಯೂಟ್ರಾನ್ ಆಯುಧಗಳಷ್ಟೇ ಶಕ್ತಿಶಾಲಿ. ನ್ಯೂಟ್ರಾನ್ ಆಯುಧಗಳನ್ನಂತೂ ಅಮೆರಿಕದ "ನಾಗರಿಕತೆಯ ಪ್ರಧಾನ ಸಾಧನೆ" ಗಳಲ್ಲೊಂದು ಎಂದು ವರ್ಣಿಸಲಾಗಿದೆ.

ನ್ಯೂಟ್ರಾನ್ ಆಯುಧಗಳು ಎಲ್ಲಾ ಸಮಸ್ತ ಜೀವರಾಶಿಯನ್ನೂ ನಾಶಗೊಳಿಸಬಲ್ಲುವು.

(ಕೃಪೆ ಸೋವಿಯತ್ ಲೇಖನಮಾಲೆ)

# ಎಸ್. ಎಫ್. ಐ. ಮತ್ತು ವಿದೇಶಿ ವಿದ್ಯಾರ್ಥಿ ಸಂಘಟನೆಗಳ ಜಂಟೀ ಹೇಳಿಕೆ

ಸಾಮ್ರಾಜ್ಯಶಾಹಿ ವಿರುದ್ಧದ ಮತ್ತು ಶಾಂತಿಗಾಗಿನ, ನಿಶ್ಯಸ್ತ್ರೀಕರಣದ ರಾಷ್ಟ್ರೀಯ ವಿಮೋಚನಾ ಹೋರಾಟ ಮತ್ತು ಸಾಮಾಜಿಕ ಪ್ರಗತಿಗಾಗಿನ ಜನತೆಯ ಹೋರಾಟಕ್ಕೆ ಎಲ್ಲ ಪ್ರಜಾಸತ್ತಾತ್ಮಕ, ಪ್ರಗತಿಪರ ಮತ್ತು ಕ್ರಾಂತಿಕಾರಿ ಯುವ ಜನತೆ ಹಾಗೂ ವಿದ್ಯಾರ್ಥಿಗಳ ಸಂಘಟನೆಗಳು ತಮ್ಮ ಕಾಣಿಕೆಯನ್ನು ಸಲ್ಲಿಸುವುದು ಅಗತ್ಯವೆಂದು ಎಸ್. ಎಫ್. ಐ ಮತ್ತು ಏಳು ವಿದೇಶಿ ರಾಷ್ಟ್ರಗಳ ಒಂಬತ್ತು ವಿದ್ಯಾರ್ಥಿ ಸಂಘಟನೆಗಳು ಜಂಟೀ ಹೇಳಿಕೆಯೊಂದರಲ್ಲಿ ತಿಳಿಸಿವೆ ಈ ಹೇಳಿಕೆಯನ್ನು ಕಲ್ಕತ್ತಾದಲ್ಲಿ ನಡೆದ ಎಸ್. ಎಫ್. ಐ. ನ 5ನೇ ರಾಷ್ಟ್ರೀಯ ಸಮ್ಮೇಳನದಲ್ಲಿ ಬಿಡುಗಡೆ ಮಾಡಲಾಗಿದೆ.

ಅಮೆರಿಕನ್ ಸಾಮ್ರಾಜ್ಯಶಾಹಿ ಮತ್ತು ಅದರ ನ್ಯಾಟೋ ಮಿತ್ರ ಕೂಟ ಮಿಲಿಟರಿ ನೆಲೆಗಳನ್ನು ಬಲಗೊಳಿಸುತ್ತಿರುವುದು ಜಾಗತಿಕ ಶಾಂತಿ ಮತ್ತು ರಾಷ್ಟ್ರಗಳ ಪರಮಾಧಿಕಾರಕ್ಕೆ ಬೆದರಿಕೆಯನ್ನೊಡ್ಡುತ್ತಿವೆ. ಅಲ್ಲದೆ ಜನತೆಯ ಹೋರಾಟಗಳನ್ನು ವಿಫಲಗೊಳಿಸಲು ಇವುಗಳನ್ನು ಬಳಸಿಕೊಳ್ಳಲಾಗುತ್ತಿದೆಯೆಂದು ಹೇಳಿಕೆ ತಿಳಿಸಿದೆ.

ಸಾಮ್ರಾಜ್ಯಶಾಹಿಯು ತನ್ನ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ಕುತಂತ್ರಗಳನ್ನು ಮತ್ತು ಮಿಲಿಟರಿ ಹಸ್ತಕ್ಷೇಪವನ್ನು ತೀವ್ರಗೊಳಿಸುತ್ತಿದೆ ದಕ್ಷಿಣ ಆಫ್ರಿಕ ಮತ್ತು ನಮಿಬಿಯಾ ಜನತೆಯ ಸಾಮ್ರಾಜ್ಯಶಾಹಿ, ವಸಾಹತುಶಾಹಿ ಜನಾಂಗ ಭೇದ ನೀತಿ ವಿರುದ್ಧ ಹೋರಾಟವನ್ನು ಈ ಶಕ್ತಿಗಳು ವಿಫಲಗೊಳಿಸುತ್ತಿವೆ ಲ್ಯಾಟಿನ್ ಅಮೆರಿಕ, ಕ್ಯಾರಿಬಿಯನ್ ಮತ್ತು ಮಧ್ಯ ಅಮೆರಿಕ ಜನತೆಯ ವಿರುದ್ಧ ಅಮೆರಿಕ ಮತ್ತು ಅದರ ನ್ಯಾಟೋ ಮಿತ್ರ ದೇಶಗಳು ತಮ್ಮ ಹಸ್ತಕ್ಷೇಪವನ್ನು ಹೆಚ್ಚಿಸಿದೆ ಎಂದು ಹೇಳಿಕೆ ಖಂಡಿಸಿದೆ.

ಜಗತ್ತನ್ನು ಅಣು ಯುದ್ಧದ ಸರ್ವನಾಶದಿಂದ ರಕ್ಷಿಸಲು ಸಮಾಜವಾದಿ ದೇಶಗಳ ಶಾಂತಿ ಪ್ರಯತ್ನವನ್ನು ಬೆಂಬಲಿಸುತ್ತವೆಂದು ಹೇಳಿಕೆ ತಿಳಿಸಿದೆ.

ಅಫ್‌ಘಾನಿಸ್ಥಾನದ ಏಪ್ರಿಲ್ ಕ್ರಾಂತಿಯ ವಿರುದ್ಧ ಪಾಕಿಸ್ಥಾನೀ ಮಿಲಿಟರಿ ಆಡಳಿತವನ್ನು ಅಮೆರಿಕ ಎತ್ತಿಕಟ್ಟುತ್ತಿದೆ ಅಂತೆಯೇ ಬಾಂಗ್ಲಾದೇಶ, ನೇಪಾಳ ಮತ್ತು ಶ್ರೀಲಂಕಾಗಳಲ್ಲಿ ತನ್ನ ಅನಿಯಮಿತ ಯೋಜನೆಗಳನ್ನು ಜಾರಿಗೊಳಿಸುತ್ತಿದೆ ಎಂದು ಹೇಳಿಕೆ ತಿಳಿಸಿವೆ.

ಅನಾಗರಿಕ ಹಿಂಸೆ, ಕೊಲೆ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯಲ್ಲಿ ತೊಡಗಿರುವ ಇರಾನಿನ ಪ್ರತೀಗಾಮಿ ಇಸ್ಲಾಮಿಕ್ ಆಡಳಿತವನ್ನು ಖಂಡಿಸುತ್ತವೆಂದು ಹೇಳಿಕೆ ತಿಳಿಸಿದೆ.

ಭಾರತೀಯ ವಿದ್ಯಾರ್ಥಿ ಮತ್ತು ಯುವಜನತೆಯ ಶಾಂತಿ, ನಿಶ್ಯಸ್ತ್ರೀಕರಣ ಮತ್ತು ಸಾಮಾಜಿಕ ಪ್ರಗತಿಗಾಗಿನ ಹೋರಾಟಕ್ಕೆ ಯಶಸ್ಸನ್ನು ಹೇಳಿಕೆ ಕೋರಿದೆ.

ಹೇಳಿಕೆ ನೀಡಿರುವ ವಿದ್ಯಾರ್ಥಿ ಸಂಘಟನೆಗಳು; ಎಸ್. ಎಫ್. ಐ., ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್, ಸೌತ್ ವೆಸ್ಟ್ ಆಫ್ರಿಕನ್ ಪೀಪಲ್ಸ್ ಆರ್ಗನೈಸೇಷನ್, ನೇಪಾಲ ಪ್ರೊಗ್ರೆಸ್ಸಿವ್ ಸ್ಟುಡೆಂಟ್ಸ್ ಯೂನಿಯನ್.

# ವಿದ್ಯುಚ್ಛಕ್ತಿ ಕಡಿತ: ರಾಜ್ಯ ಸಮಿತಿ ಖಂಡನೆ

ವಿದ್ಯುತ್ ಕೊರತೆಯಿಂದಾಗಿ ಮೂರುವಾರ ಬೃಹತ್ ಕಾರ್ಖಾನೆಗಳನ್ನು ಮುಚ್ಚಬೇಕಾದೀತೆಂಬ ಎಚ್ಚರಿಕೆಯನ್ನು ವಿದ್ಯುತ್ ಖಾತೆ ಮಂತ್ರಿ ಜೆ. ಎಚ್ ಪಟೇಲರು ಮೊನ್ನೆ ಶಾಸನ ಸಭೆಯಲ್ಲಿ ಹೇಳಿಕೆ ನೀಡಿರುವುದು ಅತ್ಯಂತ ಅಪಾಯಕಾರಿಯಾಗಿದೆ ಸಾಕಷ್ಟು ವಿದ್ಯುತ್ ಪೂರೈಕೆಗಾಗಿ ಹಿಂದಿನ ಕಾಂಗ್ರೆ ಸರಕಾರ ಯೋಗ್ಯ ಕ್ರಮ ಕೈಗೊಳ್ಳದಿರುವುದು ಖಂಡನೀಯವಾಗಿದ್ದರೂ ಕೂಡ ಕಳೆದ ಒಂದು ವರ್ಷದಿಂದ ಅಧಿಕಾರದಲ್ಲಿರುವ ಜನತಾ ಸರಕಾರ ಕೂಡಲೆ ಶರಾವತಿ ಯೋಜನೆಯನ್ನು ಸುಧಾರಿಸುವಲ್ಲಿಯೂ ಕಾಳಿಯೋಜನೆಯನ್ನು ತ್ವರಿತ ಗತಿಯಲ್ಲಿ ಮುಕ್ತಾಯಗೊಳಿಸಲಿಕ್ಕೂ ಆದ್ಯತೆ ನೀಡದಿರುವುದು ಖಂಡನೀಯ. ಮೂರುವಾರ ಬೃಹತ್ ಕೈಗಾರಿಕೆಗಳು ಮುಚ್ಚಲ್ಪಟ್ಟರೆ ಲಕ್ಷಾವಧಿ ಕಾರ್ಮಿಕರು ಉದರ ಪೋಷಣೆ ಮಾಡುವುದೇ ಕಷ್ಟಕರವಾಗುತ್ತದೆ, ಉತ್ಪಾದನೆಗೂ ಕೊಡಲಿಏಟು ಬೀಳುತ್ತದೆ. ಈ ಕ್ರಮವನ್ನು ಜನತಾ ಸರಕಾರ ಬಿಟ್ಟುಕೊಡಬೇಕೆಂದು ಸಿ ಪಿ ಐ (ಎಂ) ರಾಜ್ಯ ಘಟಕ ಸರಕಾರವನ್ನು ಒತ್ತಾಯ ಪಡಿಸುತ್ತದೆ ಆ ರೀತಿ ಕಾರ್ಖಾನೆಗಳು ಬಂದಾಗುವುದೇ ಆದರೆ ಅವುಗಳಲ್ಲಿ ದುಡಿಯುವ ಕಾರ್ಮಿಕರಿಗೆಲ್ಲಾ ಪೂರ್ಣ ವೇತನ ಸಂದಾಯವಾಗುವಂತೆ ಕ್ರಮವಹಿಸಬೇಕಾದ್ದು ಅಗತ್ಯ

ರಾಜ್ಯ ಸಿ ಐ ಟಿ. ಯು ಕೂಡ ವಿದ್ಯುತ್ ಕಡಿತವನ್ನು ಖಂಡಿಸಿ, ಕಾರ್ಮಿಕರಿಗೆ ಪೂರ್ಣ ರಕ್ಷಣೆ ನೀಡಬೇಕೆಂದು, ಯಾವುದೇ ರೀತಿಯಲ್ಲಿ ಅವರಿಗೆ ಹಾನಿಯಾಗದಂತೆ ನೋಡಿಕೊಳ್ಳಬೇಕೆಂದೂ ರಾಜ್ಯ ಸರಕಾರವನ್ನು ಕೇಳಿಕೊಂಡಿದೆ.

# ಹೆಂಚಿನ ಮಜೂರರ ಚಾರಿತ್ರಿಕ ಹೋರಾಟ

(3ನೇ ಪುಟದಿಂದ)

ಏರಿಕೆಗನುಸಾರವಾಗಿ ರಾಜ್ಯದ ಸೂಚ್ಯಂಕದಲ್ಲಿ ಪ್ರತಿ ಪಾಯಿಂಟ್ ಏರಿಕೆಗೆ ಅನುಸಾರವಾಗಿ ಏರುತ್ತಿರುವ ತುಟ್ಟಿ ಭತ್ತೆಯನ್ನು ಖಂಡಿತವಾಗಿ ನಿರ್ಧರಿಸುವ ಭರವಸೆಯನ್ನು ಈ ಮುಷ್ಕರದ ವೇಳೆ ನಡೆದ ತ್ರಿಪಕ್ಷೀಯ ಸಭೆಯಲ್ಲಿ ಭರವಸೆ ಇತ್ತಿದೆ ಈ ಬಗ್ಗೆ 13 ಮಂದಿಯ ಸಮಿತಿಯನ್ನು ಕೂಡಲೇ ರಚಿಸುವ ಭರವಸೆ ಕೊಟ್ಟಿದೆ.

ಆದರೂ ಎ ಐ. ಟಿ. ಯು. ಸಿ ಮತ್ತು ಐ ಎನ್. ಟಿ. ಯು ಸಿ. ಯವರು ಈ ಒಪ್ಪಂದಕ್ಕೆ ಸಹಿ ಹಾಕದೆ ಕೊನೆಯ ಗಳಿಗೆಯಲ್ಲಿ ಮಜೂರರನ್ನು ಕೈ ಬಿಟ್ಟದ್ದು ಆಶ್ಚರ್ಯಕರ! ಆದರೆ ಅವರ ಹಿಂಬಾಲಕರು ಮುಷ್ಕರ ಹಿಂತೆಗೆದುಕೊಂಡು ಕೆಲಸಕ್ಕೆ ಹಾಜರಾಗಿದ್ದಾರೆ

# ಆಂಡ್ರೋಪೋವ್ ಇನ್ನಿಲ್ಲ

(1ನೇ ಪುಟದಿಂದ)

ಗಳಲ್ಲಿ ಸಂಚರಿಸಿದ ಅಂತಿಮ ಯಾತ್ರೆ ಇತಿಹಾಸ ಪ್ರಸಿದ್ಧ ಕೆಂಪು ಚೌಕವನ್ನು ತಲುಪಿದಾಗ ಸಹಸ್ರಾರು ಮಂದಿ ಅಗಲಿದ ತಮ್ಮ ನಾಯಕನ ಕೊನೆಯ ದರ್ಶನ ಪಡೆಯಲು ಕಿಕ್ಕಿರಿದು ನೆರೆದಿದ್ದರು

ರಷ್ಯನ್ ಕಾಲ ಮಾನ ಮಧ್ಯಾಹ್ನ 12 45ಕ್ಕೆ ಸರಿಯಾಗಿ ಆಂಡ್ರೋಪೋವ್ ಅವರ ಕಳೇಬರ ಪನ್ನಿಟ್ಟಿದ್ದ ಶವಪೆಟ್ಟಿಗೆಯನ್ನು ಲೆನಿನ್ನರ ಸಮಾಧಿಯ ಹಿಂಭಾಗದ ಸಮಾಧಿಯಲ್ಲಿ ಇರಿಸಿದಾಗ ಇಡೀ ಸೋವಿಯತ್ ದೇಶ ಮೂರು ನಿಮಿಷಗಳ ಕಾಲ ಸಂಪೂರ್ಣ ಸ್ತಬ್ಧಗೊಂಡು 15 ತಿಂಗಳುಗಳ ಅಲ್ಪ ಕಾಲಾವಧಿಯಲ್ಲಿ ಸೋವಿಯತ್ ದೇಶದ ಶಕ್ತಿಯನ್ನು ಉತ್ತಮ ಗೊಳಿಸಿ ಅದೇ ಸಮಯದಲ್ಲಿ ಶಾಂತಿಗಾಗಿ ಮತ್ತು ಅಂತರಾಷ್ಟ್ರೀಯ ಭದ್ರತೆಗಾಗಿ ಶಕ್ತಿ ಮೀರಿ ಶ್ರಮಿಸಿದ ಮಹಾನ್ ನಾಯಕನಿಗೆ ತನ್ನ ಗೌರವವನ್ನು ಸಲ್ಲಿಸಿತು

ಆಂಡ್ರೋಪೋವ್ ಅವರ ನಿಧನಕ್ಕೆ ಸಂತಾಪ ವ್ಯಕ್ತ ಪಡಿಸಿರುವ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಕ್ಯೂಲರ್ ಅವರು ತಮ್ಮ ಸಂದೇಶದಲ್ಲಿ ಕಳೆದ ವರ್ಷ ಆಂಡ್ರೋಪೋವ್ ಅವರೊಂದಿಗೆ ತಾವು ನಡೆಸಿದ ಮಾತುಕತೆಗಳನ್ನು ಸ್ಮರಿಸುತ್ತಾ 'ಜಾಗತಿಕ ಶಸ್ತ್ರಾಸ್ತ್ರ ಸ್ಪರ್ಧೆಯನ್ನು ಕೊನೆಗೊಳಿಸುವ ದಿಸೆಯಲ್ಲೂ ಜಾಗತಿಕ ಶಾಂತಿಯನ್ನು ಸಂರಕ್ಷಿಸುವ ದಿಸೆಯಲ್ಲೂ ಕಾ. ಆಂಡ್ರೋಪೋವ್ ಅವರು ದೃಢವಾಗಿ ನಿಂತು ಅದಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡಿದ್ದವರು" ಎಂಬುದಾಗಿ ತಿಳಿಸಿದ್ದಾರೆ

"ಅಧ್ಯಕ್ಷ ಆಂಡ್ರೋಪೋವ್ ಅವರು ವಿಶ್ವಶಾಂತಿಯ ಕುರಿತು ಹೊಂದಿದ್ದ ಗುರಿಯನ್ನು ಮುಂದುವರಿಸಿಕೊಂಡು ಹೋಗುವುದು ಈಗಿನ ಅಂತರಾಷ್ಟ್ರೀಯ ಸನ್ನಿವೇಶದಲ್ಲಿ ತೀರಾ ಅಗತ್ಯವಾದುದಾಗಿದೆ. ಇದಕ್ಕೆ ಬೇಕಾದ ಕ್ರಮಗಳನ್ನು ನಿಷ್ಠೆಯಿಂದ ಜ್ಯಾರಿಗೊಳಿಸುವುದು ವಿಶ್ವದ ಎಲ್ಲಾ ದೇಶಗಳ ಸರಕಾರಗಳ ಹಾಗೂ ಶಾಂತಿಪ್ರಿಯ ಜನತೆಯ ಆದ್ಯಕರ್ತವ್ಯವಾಗಿದೆ" ಎಂಬುದಾಗಿ ಅವರು ತಮ್ಮ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ

ಬಲ್ಗೇರಿಯಾ, ಹಂಗೆರಿ, ಫ್ರಾನ್ಸ್, ಸ್ಪೈಯಿನ್ ಮುಂತಾದ ದೇಶಗಳು ಆಂಡ್ರೋಪೋವ್ ಅವರ ನಿಧನಕ್ಕೆ ತಮ್ಮ ಆಳವಾದ ಶೋಕವನ್ನು ವ್ಯಕ್ತಪಡಿಸಿವೆ.

ಚೀನಾದ ಉಪಪ್ರಧಾನಿ ವಾನ್‌ಲೀ ಆಂಡ್ರೋಪೋವ್‌ರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ಮಾಸ್ಕೋಗೆ ತೆರಳಿದ್ದರು ಕಾ ಆಂಡ್ರೋಪೋವ್ ಅವರು ತಮ್ಮ ಅಧಿಕಾರಾವಧಿಯಲ್ಲಿ ಚೀನಾ ದೇಶದೊಂದಿಗಿನ ಬಾಂಧವ್ಯವನ್ನು ಉತ್ತಮಪಡಿಸಲು ತಮ್ಮ ಶಕ್ತಿ ಮೀರಿ ಶ್ರಮಿಸಿದ್ದನ್ನು ಇಲ್ಲಿ ಸ್ಮರಿಸಬಹುದು

ಭಾರತದ ಜೊತೆ ಬಾಂಧವ್ಯವೃದ್ಧಿಗಾಗಿ ತಾನು ಶಕ್ತಿಮೀರಿ ಶ್ರಮಿಸುವುದಾಗಿ ಸಿ ಪಿ ಎಸ್. ಯು ನ ನೂತನ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುವ ಕಾ. ಕೊನ್‌ಸ್ಟಾಂತಿನ್ ಚೆರ್ನೆಂಕೊ ಅವರು ಶ್ರೀಮತಿ ಗಾಂಧಿಯವರೊಡನೆ ನಡೆಸಿದ ಮಾತುಕತೆಯಲ್ಲಿ ತಿಳಿಸಿದ್ದಾರೆ.

# ದೇಶಾದ್ಯಂತ ಯಶಸ್ವೀ ಬೇಡಿಕೆ ದಿನಾಚರಣೆ

ಕಾಂಗ್ರೆಸ್ (ಐ) ಕೇಂದ್ರ ಸರಕಾರದ ಜನ ವಿರೋಧಿ ನೀತಿ, ವಿರೋಧ ಪಕ್ಷಗಳ ಆಡಳಿತದಲ್ಲಿರುವ ರಾಜ್ಯ ಸರಕಾರಗಳನ್ನು ಉರುಳಿಸುವ ಪಿತೂರಿ ಮುಂತಾದವುಗಳನ್ನು ವಿರೋಧಿಸಿ ಫೆ. 13 ರಂದು ಅಖಿಲ ಭಾರತ ಬೇಡಿಕೆ ದಿನಾಚರಣೆ ನಡೆಸಬೇಕೆಂದು ಇತ್ತೀಚೆಗೆ ಕಲ್ಕತ್ತಾದಲ್ಲಿ ಸಮಾವೇಶಗೊಂಡಿದ್ದ 17 ವಿರೋಧ ಪಕ್ಷಗಳ ಕರೆಯ ಮೇರೆಗೆ ದೇಶಾದ್ಯಂತ ಬೇಡಿಕೆ ದಿನಾಚರಣೆಯು ಅತ್ಯಂತ ಯಶಸ್ವಿಯಾಗಿ ನಡೆದಿವೆ ಈ ಕುರಿತು ಪರಿಣಾಮಕಾರೀ ಪ್ರಚಾರವನ್ನು ನಡೆಸಲಾಗಿತ್ತು. ದೆಹಲಿಯಲ್ಲಿ ಪ್ರಧಾನಿ ಶ್ರೀಮತಿ ಗಾಂಧಿಯವರ ನಿವಾಸದ ಎದುರು ಪ್ರದರ್ಶನ ನಡೆಸಲಾಯಿತು ಕಲ್ಕತ್ತಾದಲ್ಲಿ ಬೃಹತ್ ಮೆರವಣಿಗೆ, ಬಹಿರಂಗ ಸಭೆ ನಡೆಯಿತು. ಪ. ಬಂಗಾಲದ ಮುಖ್ಯಮಂತ್ರಿ ಜ್ಯೋತಿ ಬಸು ಅವರು ಸಭೆಯಲ್ಲಿ ಮಾತನಾಡಿದರು. ಹಾಗೆಯೇ ದೇಶದ ಇನ್ನುಳಿದ ಭಾಗಗಳಲ್ಲೂ ದಿನಾಚರಣೆ ಅತ್ಯಂತ ಯಶಸ್ವಿಯಾಗಿ ನಡೆದಿರುವುದಾಗಿ ತಿಳಿದು ಬಂದಿದೆ.

## ಬಿಜಾಪುರ

ಇತ್ತೀಚೆಗೆ ಕಲ್ಕತ್ತೆಯಲ್ಲಿ ನಡೆದ ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳ ಸಮಾವೇಶದ ಕರೆಯ ಮೇರೆಗೆ ಬಿಜಾಪುರದಲ್ಲಿ ಜನತಾ, ಸಿಪಿಐ (ಎಂ) ಸಿ.ಪಿ ಐ, ಕಾಂಗ್ರೆಸ್ (ಎಸ್) ಆರ್ ಪಿ ಐ ಪಕ್ಷಗಳ ಪರವಾಗಿ ಕೇಂದ್ರ ಸರಕಾರದ ಜನ ವಿರೋಧಿ ನೀತಿಯ ವಿರುದ್ಧ ಬೇಡಿಕೆ ದಿನಾಚರಣೆ ಆಚರಿಸಲಾಯಿತು. ಮುಂಜಾನೆ 10 ಘಂಟೆಯಿಂದ ಸಂಜೆ 6 ಗಂಟೆಯವರೆಗೆ ಈ ಎಲ್ಲ ಪಕ್ಷಗಳ ಮುಖಂಡರು ಮತ್ತು ಕಾರ್ಯಕರ್ತರು ಗಾಂಧಿಚೌಕದಲ್ಲಿ ಧರಣಿ ನಡೆಸಿದರು ಸಾಯಂಕಾಲ ಐ. ಸಿ ನಾಗಣ್ಣ ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಪ್ರಾರಂಭದಲ್ಲಿ ಸೋವಿಯತ್ ರಷ್ಯಾದ ಅಧ್ಯಕ್ಷರಾದ ಕಾ. ಆಂಡ್ರೋಪೋವ್‌ಅವರ ಆಕಸ್ಮಿಕ ನಿಧನಕ್ಕಾಗಿ ದುಃಖ ಪ್ರದರ್ಶನ ಮಾಡಿ ಎರಡು ನಿಮಿಷ ಮೌನ ಆಚರಿಸಲಾಯಿತು ಆ ನಂತರ ಎನ್. ಕೆ. ಉಪಾಧ್ಯಾಯ ಭೀಮಸಿ ಕಲಾದಗಿ, ಪಿ ಎಸ್ ಪಾಟೀಲ, ಎಲ್.ಕೆ. ಚಂಚಲಕರ್, ತೊರಗಲ್ ಮೊದಲಾದವರು ಭಾಷಣ ಮಾಡಿ ಕೇಂದ್ರ ಸರಕಾರದ ಆರ್ಥಿಕ ನೀತಿ, ಪಕ್ಷಾಂತರದ ತಂತ್ರಗಳನ್ನೆಲ್ಲ ಬಹಿರಂಗಗೊಳಿಸಿ ಭಾಷಣ ಮಾಡಿದರು.

## ಬಾಗೇಪಲ್ಲಿ

17 ವಿರೋಧ ಪಕ್ಷಗಳ ಕರೆಯ ಮೇರೆಗೆ ತಾ|| 13-2-84 ರಂದು ಬಾಗೇಪಲ್ಲಿಯಲ್ಲಿ ಯಶಸ್ವಿ ಮೆರವಣಿಗೆ ಮತ್ತು ಬಹಿರಂಗಸಭೆಯನ್ನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ, ಭಾರತ ಕಮ್ಯೂನಿಸ್ಟ್ ಪಕ್ಷ ಮತ್ತು ಜನತಾ ಪಕ್ಷಗಳು ನಡೆಸಿದವು. ಹಳ್ಳಿಗಳಿಂದ ನಡೆದುಕೊಂಡೇ ಮೆರವಣಿಗೆಯಲ್ಲಿ ಬಂದು ರೈತರು ಮತ್ತು ಇತರೆ ಜನ ವಿಭಾಗವು ಸರಿಯಾಗಿ ಮಧ್ಯಾಹ್ನ 1 ಘಂಟೆಗೆ ಬಾಗೇಪಲ್ಲಿಯ ಗೂಳೂರು ವೃತ್ತದ ಬಳಿ ಜಮಾಯಿಸಿದರು 2 ಘಂಟೆಗೆ ಮೆರವಣಿಗೆ ಪ್ರಾರಂಭವಾದಾಗ ಮಳೆಯು ಅಡ್ಡಿಯಾದರೂ ಲೆಕ್ಕಿಸದೆ ಸುಮಾರು 4 ಸಾವಿರಕ್ಕೂ ಮೇಲ್ಪಟ್ಟ ರೈತರು, ಯುವಜನರು, ವಿದ್ಯಾರ್ಥಿಗಳು ಮೆರವಣಿಗೆ ನಡೆಸಿದರು. ಮೆರವಣಿಗೆ ನೇತೃತ್ವವನ್ನು ಸಿ.ಪಿ.ಐ ( ಎಂ )ನ ಶಾಸಕರಾದ ಕಾಂ|| ಎ. ವಿ ಅಪ್ಪಸ್ವಾಮಿ ರೆಡ್ಡಿ ಕಾಂ|| ಜಿ ವಿ ಶ್ರೀರಾಮರೆಡ್ಡಿ, ಸಿ ಪಿ. ಐ. ನಾಯಕರಾದ ಡಿ. ಎನ್. ವೆಂಕಟರೆಡ್ಡಿ. ಜನತಾಪಕ್ಷದ ರಾಮಯ್ಯ ಶೆಟ್ಟಿಯವರು ವಹಿಸಿದರು. ಮತ್ತು ಕಾಂಗ್ರೆಸ್ಸೇತರ ಸರ್ಕಾರಗಳನ್ನು ಉರುಳಿಸುವ ಇಂದಿರಾಗಾಂಧಿಯ ಕುತಂತ್ರ ನಿರುದ್ಯೋಗ ಸಮಸ್ಯೆ, ಬೆಲೆಯೇರಿಕೆ ಮುಂತಾದ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ತಹಸೀಲ್ದಾರವರಿಗೆ ಅರ್ಪಿಸಲಾಯಿತು.

ನಂತರ ಚಿತ್ರಾವತಿ ರಂಗಮಂಟಪದ ಮೈದಾನದಲ್ಲಿ ನಡೆದ ಭಾರಿ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಸಿ ಪಿ ಐ ನ ಕಾಂ|| ಡಿ ಎನ್ ವೆಂಕಟರೆಡ್ಡಿಯವರು ವಹಿಸಿದರು

13-2-84ರ ಬೇಡಿಕೆ ದಿನಾಚರಣೆಯ ಮುಖ್ಯ ಉದ್ದೇಶವನ್ನು ವಿವರಿಸಿ ಸಿ ಪಿ. ಐ (ಎಂ)ನ ಕಾ|| ಬಿ. ಕೃಷ್ಣಮೂರ್ತಿ ಅವರು ಸ್ವಾಗತ ಭಾಷಣ ಮಾಡಿದ ನಂತರ ಬಹಿರಂಗ ಸಭೆ ಪ್ರಾರಂಭವಾಯಿತು

ಈ ಬಹಿರಂಗ ಸಭೆಯನ್ನು ಉದ್ದೇಶಿಸಿ ಕಾಂ|| ಎ ವಿ ಅಪ್ಪಸ್ವಾಮಿರೆಡ್ಡಿ, ಕಾಂ|| ಜಿ.ವಿ ಶ್ರೀರಾಮರೆಡ್ಡಿ, ಎಸ್. ಎಫ್ ಐ. ನ ಬಿ. ನಾರಾಯಣರೆಡ್ಡಿ. ಜನತಾ ಪಕ್ಷದ ಪಿ. ಸತ್ಯಂ,ಮತ್ತಿತರರು ಮಾತನಾಡಿದರು.

ಪಕ್ಷಾಂತರ ಶಾಸಕರಾದ ಉಗ್ರನರಸಿಂಹಪ್ಪ ಮತ್ತು ಹುಚ್ಚಮಾಸ್ತೀಗೌಡರ ಪ್ರತಿಕೃತಿಗಳನ್ನು ದಹನ ಮಾಡಲಾಯಿತು.

## ಉಡುಪಿ

ಕೇಂದ್ರ ಸರಕಾರದ ಜನ ವಿರೋಧಿ ನೀತಿಯನ್ನು ಪ್ರತಿಭಟಿಸಲು ಉಡುಪಿಯ ವಿರೋಧ ಪಕ್ಷಗಳಾದ ಜನತಾ ಕಮ್ಯೂನಿಸ್ಟ್ ಪಾರ್ಟಿ,ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷಗಳ ವತಿಯಿಂದ ಉಡುಪಿ ರಥಬೀದಿಯಲ್ಲಿ ಬಹಿರಂಗ ಸಭೆಯನ್ನು 13-2-84 ರಂದು ಜರುಗಿಸಲಾಯಿತು,

ಜನತಾ ಪಕ್ಷದ ಉಡುಪಿ ಅಧ್ಯಕ್ಷರಾದ ಶ್ರೀ ಸತೀಶಹೆಗ್ಗಡೆಯವರು ಸಭಾಧ್ಯಕ್ಷತೆ ವಹಿಸಿದ್ದರು.

ಸಿ.ಪಿ.ಐ. ಪಕ್ಷದ ಹಿರಿಯ ಮುಂದಾಳು ಶ್ರೀ.ಬಿ.ವಿ. ಕಕ್ಕಿಲ್ಲಾಯ,ಮಾರ್ಕ್ಸ್‌ವಾದಿಕಮ್ಯೂನಿಸ್ಟ್ ಪಕ್ಷದ ಶ್ರೀ.ಡೇವಿಡ್ ಕರ್ಕಡ, ಜನತಾ ಪಕ್ಷದ ಶ್ರೀ ಗೋಪಾಲಕೃಷ್ಣ ಮುಂತಾದವರು ಸಭೆಯಲ್ಲಿ ಮಾತನಾಡಿದರು.

## ಬೆಂಗಳೂರು

ಫೆಬ್ರವರಿ 13 ರಂದು ಅಖಿಲಭಾರತ ಬೇಡಿಕೆ ದಿನಾಚರಣೆ ನಡೆಸಲು 17 ವಿರೋಧ ಪಕ್ಷಗಳು ನೀಡಿದ ಕರೆಗೆ ಅನುಸಾರವಾಗಿ ಬೆಂಗಳೂರಿನಲ್ಲಿ ಪೋಸ್ಟರ್‌ಗಳು ಮತ್ತು ಕರಪತ್ರಗಳ ಮೂಲಕ ವ್ಯಾಪಕ ಪ್ರಚಾರ ನಡೆಸಲಾಯಿತು. ಸಿ.ಪಿ.ಐ.[ಎಂ]ನ ಸಾವಿರಕ್ಕೂ ಮೀರಿದ ಕಾರ್ಯಕರ್ತರು ಸಿಲ್ವರ್‌ಜ್ಯೂಬಿಲಿಪಾರ್ಕ್‌ನಿಂದ ನ್ಯಾಶನಲ್ ಕಾಲೇಜು ಮೈದಾನದವರೆಗೆ ಮೆರವಣಿಗೆ ನಡೆಸಿದರು. ಆದರೆ ಭಾರಿ ಮಳೆಯ ಕಾರಣ ನಡೆಯಬೇಕಾಗಿದ್ದ ಬಹಿರಂಗ ಸಭೆಯನ್ನು ರದ್ದುಗೊಳಿಸಲಾಯಿತು

---

(4ನೇ ಪುಟದಿಂದ)

ಎಂದು ನಿಯೋಗ ಟೀಕಿಸಿದೆ ಬಹುತೇಕ ಎಲ್ಲ ಕಾರ್ಮಿಕ ಸಂಘಗಳು ಈ ಬಗ್ಗೆ ಅಸಮ್ಮತಿಯನ್ನು ವ್ಯಕ್ತಪಡಿಸಿವೆ.

ಎಲ್ಲ ಕಾರ್ಮಿಕ ಸಂಘಗಳಿಗೂ ಒಪ್ಪಿಗೆಯಾಗುವ ಪರ್ಯಾಯವಾದ ತಪಾಸಣಾ ಕ್ರಮವನ್ನು ನಿಯೋಜಿಸಲು ಅವುಗಳ ಸಭೆಯನ್ನು ಕರೆಯಬೇಕೆಂದು ಕಾರ್ಮಿಕ ಸಚಿವರಿಗೆ ನಿಯೋಗ ತಿಳಿಸಿತು ಕಾರ್ಮಿಕ ಸಚಿವರು ಅಂಶಗಳನ್ನು ಪರಿಗಣಿಸುವುದಾಗಿ ತಿಳಿಸಿದ್ದಾರೆ.

---

# ವಿಶ್ವಶಾಂತಿ ಸಪ್ತಾಹ

## ಶಿವಮೊಗ್ಗ

ಅಮೇರಿಕಾ ಮತ್ತು ಇತರ ಸಾಮ್ರಾಜ್ಯಶಾಹಿಗಳ ಯುದ್ಧಕೋರ ನೀತಿಯನ್ನು ಪ್ರತಿಭಟಿಸಿ ಜಗತ್ತಿನಲ್ಲಿ ಶಾಂತಿ ನೆಲೆಸಲು ಪರಮಾಣು ಯುದ್ಧ ವಿರೋಧಿ ಶಾಂತಿ ರಕ್ಷಣಾ ವಾರಾಚರಣೆಯನ್ನು ಆಚರಿಸಲು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿ ಕೊಟ್ಟ ಕರೆ ಮೇರೆಗೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಶಿವಮೊಗ್ಗ ಪ್ರಾದೇಶಿಕ ಸಮಿತಿಯ ಮುಖಂಡತ್ವದಲ್ಲಿ ದಿನಾಂಕ: 5-2-84 ರಂದು ಒಂದು ಸೈಕಲ್ ಮೆರವಣಿಗೆಯನ್ನು ಏರ್ಪಡಿಸಿತ್ತು ಮೆರವಣಿಗೆಯಲ್ಲಿ ಶಾಂತಿ ಘೋಷಣೆಗಳನ್ನು ಮತ್ತು ಸಾಮ್ರಾಜ್ಯವಾದಿಗಳ ಯುದ್ಧ ಕೋರ ನೀತಿಗೆ ಧಿಕ್ಕಾರ ಘೋಷಣೆಗಳನ್ನು ಕೂಗಿದರು.

ಮೆರವಣಿಗೆಯಾದ ನಂತರ ಪಕ್ಷದ ಕಛೇರಿಯಲ್ಲಿ ನಡೆದ ಸಭೆಯಲ್ಲಿ ಕಾ. ಚಂದುಕುಟ್ಟಿ, ಕಾ. ಶಿವಶಂಕರ್, ಕಾ. ತಿರುಕಪ್ಪ, ಕಾ. ಪುಟ್ಟಸ್ವಾಮಿಯವರು, ಇನ್ನೂ ಮುಂತಾದವರು ಮಾತನಾಡಿದರು ಕಾ. ರುದ್ರಪ್ಪನವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಬೆಂಗಳೂರು

## ಯುದ್ಧ ವಿರೋಧಿಸಿ ಕವಿ ಸಮ್ಮೇಳನ

ಕರ್ನಾಟಕ ಕಲೆ ಮತ್ತು ಸಾಹಿತ್ಯ ಸಂಘದ ಆಶ್ರಯದಲ್ಲಿ ಫೆ. 5 ರಂದು ಬೆಂಗಳೂರಿನ ರಾಮಕೃಷ್ಣ ಲಾಡ್ಜ್‌ನಲ್ಲಿ ಕವಿ ಸಮ್ಮೇಳನ ನಡೆಯಿತು. 'ಯುದ್ಧವನ್ನು ಬುಡಸಹಿತ ಅಳಿಸುವೆವು' ಎಂಬ ವಿಶಯದ ಮೇಲೆ ಎಂಟು ಮಂದಿ ತಮಿಳು ಕವಿಗಳು ತಮ್ಮ ಕವಿತೆಗಳನ್ನು ಓದಿದರು. ಸಮ್ಮೇಳನದ ಅಧ್ಯಕ್ಷತೆಯನ್ನು ಶ್ರೀಯುತ ಐ ಉಲಗನಾಥನ್ ಅವರು ವಹಿಸಿದ್ದರು. ಅದೇ ದಿನ 'ಸಾಹಿತ್ಯದಲ್ಲಿ ಮಾನವೀಯತೆ ಎಂಬ ವಿಶಯದ ಕುರಿತು ವಿಚಾರ ಘೋಷ್ಠಿ ಸಹ ನಡೆಯಿತು. ಇದರ ಅಧ್ಯಕ್ಷತೆಯನ್ನು ಶ್ರೀ. ಎಸ್. ಪಿ ರಾಜಗೋಪಾಲ್ ಅವರು ವಹಿಸಿದ್ದರು. ಘೋಷ್ಠಿಯಲ್ಲಿ ಶ್ರೀ. ಪಿ ಕೆ. ಸುಬ್ರಮಣಿ, ಶ್ರೀ. ಮಡಿವಾಳ ಮುಂತಾದವರು ಭಾಗವಹಿಸಿದ್ದರು

---

## ಫೆಬ್ರವರಿ 25 ರಂದು ರಾಜ್ಯ ಮಟ್ಟದ ಸಮಾವೇಶ

17 ವಿರೋಧ ಪಕ್ಷಗಳು ಕಲ್ಕತ್ತದಲ್ಲಿ ನಿರ್ಣಯಿಸಿದಂತೆ ಕೇಂದ್ರ ಸರಕಾರದ ಜನ ವಿರೋಧಿ ನೀತಿಯ ವಿರುದ್ಧ ರಾಜ್ಯ ಮಟ್ಟದ ಸಮ್ಮೇಳನ ಫೆಬ್ರವರಿ 25 ರಂದು ಬೆಂಗಳೂರಿನ ಟೌನ್ ಹಾಲಿನಲ್ಲಿ ಸೇರುತ್ತದೆ. ಆ ದಿವಸ ಸಾಯಂಕಾಲ ಮಲ್ಲೇಶ್ವರಂ ಮೈದಾನದಲ್ಲಿ ನಡೆಯುವ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಸಿ ಪಿ ಐ (ಎಂ) ಪ್ರಧಾನ ಕಾರ್ಯದರ್ಶಿ ಇ ಎಂ ಎಸ್. ನಂಬೂದಿರಿಪಾದ್ ಮೊದಲಾದವರು ಭಾಷಣ ಮಾಡುತ್ತಾರೆ ಎಲ್ಲಾ ಜಿಲ್ಲೆಗಳಿಂದ ಪ್ರತಿನಿಧಿಗಳು ಈ ಸಮಾವೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ

Printed & Publishedby P. Ramachandra Raoby him on behalf of the Communist Pary of India (Marxist) Karnataka State Committee, K. V. Temple Street, Sultanpet, Bangalore-560053. Editorial and managerial office, L-56, K V. Temple Street, Sultanpet, B-53. Phone : 24154
Editor : P. Ramachandra Rao